ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂ: ಉಕೃನಿ(ಕೃಯಾಂ&ಸೂನೀ)/LAQ 1894/2024-25

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-01,
ದಿನಾಂಕ: 18.07.2024

ರವರಿಗೆ,

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕೃಷಿ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಮಾನ್ಯರೆ,

ವಿಷಯ: ಶ್ರೀ. ಮಹೇಶ್ ಟೆಂಗಿನಕಾಯಿ (ಹುಬ್ಬಳ್ಳಿಧಾರವಾಡ ಕೇಂದ್ರೀಯ), ಮಾನ್ಯ ವಿಧಾನಸಭೆಯ ಸದಸ್ಯರು ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ-1894 ಕ್ಕೆ ಉತ್ತರಿಸುವ ಕುರಿತು.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಮಹೇಶ್ ಟೆಂಗಿನಕಾಯಿ (ಹುಬ್ಬಳ್ಳಿ ಧಾರವಾಡ ಕೇಂದ್ರೀಯ), ಮಾನ್ಯ ವಿಧಾನಸಭೆಯ ಸದಸ್ಯರು ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ-1894 ಕ್ಕೆ ಕೃಷಿ ಯಾಂತ್ರೀಕರಣ ಮತ್ತು ಸೂಕ್ಷ್ಮ ನೀರಾವರಿ ವಿಭಾಗಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಿದ್ಧಪಡಿಸಿ ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ನಂಬುಗೆಯ,

ಕೃಷಿ ನಿರ್ದೇಶಕರು

ಕರ್ನಾಟಕ ವಿಧಾನಸಭೆ

ಪ್ರಶ್ನೆ ಸಂಖ್ಯೆ		ಎಲ್.ಎ.ಕ್ಯೂ.1894
ಸದಸ್ಯರ ಹೆಸರು		ಶ್ರೀ. ಮಹೇಶ್ ಟೆಂಗಿನಕಾಯಿ (ಹುಬ್ಬಳ್ಳಿಧಾರವಾಡ ಕೇಂದ್ರೀಯ)
ಉತ್ತರಿಸಬೇಕಾದ ದಿನಾಂಕ		24/07/2024
ಉತ್ತರಿಸುವ ಸಚಿವರು		ಮಾನ್ಯ ಕೃಷಿ ಸಚಿವರು.
ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಹಾಗೂ ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದಲ್ಲಿರುವ ರೈತರಿಗೆ ಆಧುನಿಕ ಕೃಷಿಯಲ್ಲಿ ತೊಡಗಿಸಿಕೊಳ್ಳಲು ಉತ್ತೇಜನ ನೀಡಲಾಗುತ್ತಿದೆಯೇ;	ರಾಜ್ಯದಲ್ಲಿರುವ ಹಾಗೂ ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದಲ್ಲಿರುವ ರೈತರಿಗೆ ಆಧುನಿಕ ಕೃಷಿಯಲ್ಲಿ ತೊಡಗಿಸಿಕೊಳ್ಳಲು ಉತ್ತೇಜನ ನೀಡಲಾಗುತ್ತಿದೆ.
ಆ)	ಹಾಗಿದ್ದಲ್ಲಿ, ಆಧುನಿಕ ಕೃಷಿಗೆ ಉತ್ತೇಜನ ನೀಡುವ ದಿಸೆಯಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು; (ವಿವರ ನೀಡುವುದು)	ಆಧುನಿಕ ಕೃಷಿಗೆ ಉತ್ತೇಜನ ನೀಡುವ ದಿಸೆಯಲ್ಲಿ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.
ಇ)	ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ರೈತರಿಗೆ ರಿಯಾಯಿತಿ ದರದಲ್ಲಿ ನೀಡುವ ಕೃಷಿ ಯಂತ್ರೋಪಕರಣಗಳು ಸಮರ್ಪಕವಾಗಿ ಪೂರೈಕೆಯಾಗುತ್ತಿವೆಯೇ;	ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ರೈತರಿಗೆ ರಿಯಾಯಿತಿ ದರದಲ್ಲಿ ಅನುದಾನ ಲಭ್ಯತೆಗೆ ಅನುಗುಣವಾಗಿ ಕೃಷಿ ಯಂತ್ರೋಪಕರಣಗಳನ್ನು ಸಮರ್ಪಕವಾಗಿ ಪೂರೈಕೆ ಮಾಡಲಾಗುತ್ತಿದೆ.
ಈ)	ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಎಷ್ಟು ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ಪೂರೈಸಲಾಗಿದೆ; (ರೈತರ ವಿವರಗಳೊಂದಿಗೆ ಮಾಹಿತಿ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ 43 ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ಪೂರೈಸಲಾಗಿದೆ. ವಿವರ ಈ ಕೆಳಗಿನಂತಿದೆ. **ಕ್ರ.ಸಂ** / **ವರ್ಷ** / **ಸಂಖ್ಯೆ** 01 / 2021-22 / 16 02 / 2022-23 / 17 03 / 2023-24 / 10 **ಒಟ್ಟು** / **43** ಕೃಷಿ ಯಂತ್ರೋಪಕರಣಗಳ ರೈತರ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಿದೆ.
ಉ)	ಸಾಮಾನ್ಯ ವರ್ಗದ ರೈತರಿಗೆ ಕೃಷಿ ಯಂತ್ರೋಪಕರಣಗಳ ರಿಯಾಯಿತಿ ದರವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವ ಕಾಲಮಿತಿಯೊಳಗೆ ರಿಯಾಯಿತಿ ದರವನ್ನು ಹೆಚ್ಚಿಸಲಾಗುವುದು;(ವಿವರ ನೀಡುವುದು)	ಸಾಮಾನ್ಯ ವರ್ಗದ ರೈತರಿಗೆ ಕೃಷಿ ಯಂತ್ರೋಪಕರಣಗಳ ರಿಯಾಯಿತಿ ದರವನ್ನು ಹೆಚ್ಚಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಕ್ರ.ಸಂ.	ಪ್ರಶ್ನೆ	ಉತ್ತರ
ಊ)	ರೈತರಿಗೆ ಯಾವ ಯಾವ ಕೃಷಿ ಯಂತ್ರೋಪಕರಣಗಳನ್ನು ರಿಯಾಯಿತಿ ದರದಲ್ಲಿ ನೀಡಲಾಗುವುದು; (ಸಂಪೂರ್ಣ ವಿವರ ಒದಗಿಸುವುದು)	ರೈತರಿಗೆ ವಿವಿಧ ಮಾದರಿಯ ಕೃಷಿ ಯಂತ್ರೋಪಕರಣಗಳನ್ನು ಸಹಾಯಧನದಡಿ ಒದಗಿಸಲಾಗುತ್ತಿದೆ. ವಿವರಗಳನ್ನು **ಅನುಬಂಧ-3** ರಲ್ಲಿ ನೀಡಿದೆ.
ಋ)	ಕಳೆದ ಮೂರು ವರ್ಷಗಳಲ್ಲಿ ಕೊಳವೆ ಬಾವಿ ಯೋಜನೆಯಡಿ ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ರೈತರು ಫಲಾನುಭವಿಗಳಾಗಿದ್ದಾರೆ; (ರೈತರ ವಿವರಗಳೊಂದಿಗೆ ಮಾಹಿತಿ ನೀಡುವುದು)	ಅನ್ವಯಿಸುವುದಿಲ್ಲ.
ಎ)	ರೈತರು ಕೃಷಿ ಇಲಾಖೆಯ ವಿವಿಧ ಯೋಜನೆಗಳ ಸೌಲಭ್ಯ ಪಡೆಯಲು ಅನುಸರಿಸುವ ಮಾನದಂಡಗಳೇನು ಮತ್ತು ಎಷ್ಟು ಸಹಾಯಧನ ನೀಡಲಾಗುತ್ತದೆ; (ವಿವರ ನೀಡುವುದು)	ರೈತರು ಕೃಷಿ ಇಲಾಖೆಯ ವಿವಿಧ ಯೋಜನೆಗಳ ಸೌಲಭ್ಯ ಪಡೆಯಲು ಅನುಸರಿಸುವ ಮಾನದಂಡಗಳು ಮತ್ತು ಸಹಾಯಧನದ ವಿವರಗಳನ್ನು **ಅನುಬಂಧ-4** ರಲ್ಲಿ ನೀಡಲಾಗಿದೆ.
ಏ)	ರಾಜ್ಯದಲ್ಲಿ ಸಾವಯವ ಕೃಷಿಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ರಾಜ್ಯದಲ್ಲಿ ಸಾವಯವ ಕೃಷಿಯನ್ನು ಕೃಷಿಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳನ್ನು **ಅನುಬಂಧ-5** ರಲ್ಲಿ ನೀಡಲಾಗಿದೆ.

ಕೃಷಿ ನಿರ್ದೇಶಕರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1894 ಗೆ ಅನುಬಂಧ-1

- ಕೃಷಿ ಯಾಂತ್ರೀಕರಣ ಯೋಜನೆಯಡಿ ಆಧುನಿಕ ಕೃಷಿ ಯಂತ್ರೋಪಕರಣಗಳಾದ ಕಂಬೈನ್ಡ್ ಹಾರ್ವೆಸ್ಟರ್, ಶುಗರ್ ಕೇನ್ ಹಾರ್ವೆಸ್ಟರ್, ಬೇಲರ್ಸ್, ರೀಪರ್ಸ್ ಕಮ್ ಬೈಂಡರ್ಸ ಹೀಗೆ ಮುಂತಾದ ಅತ್ಯಾಧುನಿಕ ಕೃಷಿ ಯಂತ್ರೋಪಕರಣಗಳನ್ನು ಸಹಾಯಧನದಡಿ ಒದಗಿಸಲಾಗುತ್ತಿದೆ.
- ಕೇಂದ್ರ ಪುರಸ್ಕೃತ ಕೃಷಿ ಯಾಂತ್ರೀಕರಣ ಉಪ ಅಭಿಯಾನ(SMAM) ಯೋಜನೆಯಡಿ ಕಡಿಮೆ ಮಟ್ಟದ ಯಾಂತ್ರೀಕರಣಗೊಂಡಿರುವ ಆಯ್ದ ಗ್ರಾಮಗಳಲ್ಲಿ ಕೃಷಿ ಯಂತ್ರೋಪಕರಣಗಳ ಮತ್ತು ಕೃಷಿ ಸಂಸ್ಕರಣಾ ಘಟಕಗಳ ಬ್ಯಾಂಕ್ (Farm Machinery Banks) ಗಳನ್ನು ಸ್ಥಾಪಿಸಲಾಗುತ್ತಿದೆ.
- ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ.
- ಕೀಟ ನಿರ್ವಹಣೆಗೆ ಕೀಟ ನಾಶಕಗಳ ಸಿಂಪರಣೆ ಮತ್ತು ಇತರೆ ಕಾರ್ಯಗಳಿಗೆ ಡ್ರೋನ್ ಬಳಕೆ ಮಾಡಲಾಗುತ್ತಿದೆ.
- ನವೀನ/ಹೊಸ ಉತ್ತಮ ತಳಿಯ ಗುಣಮಟ್ಟದ ಬೀಜಗಳನ್ನು ಸಹಾಯಧನದಡಿ ಒದಗಿಸಲಾಗುತ್ತಿದೆ.
- ವಿವಿಧ ಬೆಳೆಗಳಲ್ಲಿ ಬೆಳೆ ಪದ್ಧತಿ ಆಧಾರಿತ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲಾಗುತ್ತಿದೆ.
- ನೀರಿನ ಸಮರ್ಥ ಬಳಕೆಯನ್ನು ಉತ್ತೇಜಿಸಲು ಸೂಕ್ಷ್ಮ ನೀರಾವರಿ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ.
- ಆಧುನಿಕ ಕೃಷಿ ತಂತ್ರಜ್ಞಾನವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹಾಗೂ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಪೂರಕವಾಗುವಂತೆ ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ ಪ್ರಶಸ್ತಿಗಳನ್ನು ರೈತರಿಗೆ ನೀಡಲಾಗುತ್ತಿದೆ.
- ಕೃಷಿಗೆ ಸಂಬಂಧಿಸಿದ ಪ್ರಚಲಿತ ವಿದ್ಯಮಾನಗಳ ಬಗ್ಗೆ ಮಾಹಿತಿ ನೀಡಲು ಹಾಗೂ ಇಲಾಖೆಯ ಎಲ್ಲಾ ಯೋಜನೆಗಳನ್ನು ಸಮರ್ಪಕವಾಗಿ ರೈತರಿಗೆ ತಲುಪಿಸುವ ನಿಟ್ಟಿನಲ್ಲಿ ರೈತರಿಗೆ ವಿಶೇಷ ತರಬೇತಿಗಳನ್ನು ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳ ಮೂಲಕ ನೀಡಲಾಗುತ್ತಿದೆ.

ಜಂಟಿ ಕೃಷಿ ನಿರ್ದೇಶಕರು
ಕೃಷಿ ಯಾಂತ್ರೀಕರಣ ಮತ್ತು ಸೂಕ್ಷ್ಮ ನೀರಾವರಿ
ಬೆಂಗಳೂರು.

ಚುಕ್ಕೆ ಗುರುತಿಲ್ಲದ ಪ್ರ.ಸಂ:1894 ಗೆ ಅನುಬಂಧ-2

ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ರೈತರಿಗೆ ಕೃಷಿ ಇಲಾಖೆಯಿಂದ ಸಹಾಯಧನದಲ್ಲಿ ವಿತರಿಸಿದ ವಿವಿಧ ಕೃಷಿ ಯಂತ್ರೋಪಕರಣಗಳ ವಿವರ

ಕ್ರ.ಸಂ	ವರ್ಷ	ಜಿಲ್ಲೆ	ತಾಲೂಕ	ಗ್ರಾಮ	ರೈತರ ಹೆಸರು	ಎಫ್.ಐ.ಡಿ	ವರ್ಗ	ಉಪಕರಣದ ಹೆಸರು	ಸಹಾಯಧನ
1	2021-22	ಧಾರವಾಡ	ಹುಬ್ಬಳ್ಳಿ ನಗರ	ಉಣಕಲ್	ಫಕ್ಕೀರಪ್ಪ ಸವದತ್ತಿ	FID0906000000418	ಸಾಮಾನ್ಯ	ಬಿತ್ತನೆ ಕೂರಿಗೆ	30744
2	2021-22	ಧಾರವಾಡ	ಹುಬ್ಬಳ್ಳಿ ನಗರ	ಉಣಕಲ್	ಶಿವಾನಂದ ಪಾಗದ	FID0906000001457	ಸಾಮಾನ್ಯ	ಎಮ್.ಬಿ. ಪ್ಲೋ	46000
3	2021-22	ಧಾರವಾಡ	ಹುಬ್ಬಳ್ಳಿ ನಗರ	ಉಣಕಲ್	ಮಲ್ಲಪ್ಪ ಗುರಣ್ಣವರ	FID0903000000223	ಸಾಮಾನ್ಯ	ಎಮ್.ಬಿ. ಪ್ಲೋ	46000
4	2021-22	ಧಾರವಾಡ	ಹುಬ್ಬಳ್ಳಿ ನಗರ	ಉಣಕಲ್	ಕಲ್ಲಪ್ಪ ಪಾಗದ	FID0903000001099	ಸಾಮಾನ್ಯ	ಎಮ್.ಬಿ. ಪ್ಲೋ	46000
5	2021-22	ಧಾರವಾಡ	ಹುಬ್ಬಳ್ಳಿ ನಗರ	ಉಣಕಲ್	ಬಸಪ್ಪ ಪರಣ್ಣವರ	FID0906000001338	ಸಾಮಾನ್ಯ	ಎಮ್.ಬಿ. ಪ್ಲೋ	39750
6	2021-22	ಧಾರವಾಡ	ಹುಬ್ಬಳ್ಳಿ ನಗರ	ಬೈರಿದೇವರಕೊಪ್ಪ	ಮಲ್ಲೇಶಪ್ಪ ವಗ್ಗರ	FID0906000000048	ಸಾಮಾನ್ಯ	ಎಮ್.ಬಿ. ಪ್ಲೋ	39750
7	2021-22	ಧಾರವಾಡ	ಹುಬ್ಬಳ್ಳಿ ನಗರ	ಬೈರಿದೇವರಕೊಪ್ಪ	ನಾಗಪ್ಪ ಜೋಗಾಯಿ	FID0906000001118	ಸಾಮಾನ್ಯ	ಎಮ್.ಬಿ. ಪ್ಲೋ	46000
8	2021-22	ಧಾರವಾಡ	ಹುಬ್ಬಳ್ಳಿ ನಗರ	ಬೈರಿದೇವರಕೊಪ್ಪ	ರೇಣುಕಾ ಜೋಗಾಯಿ	FID0906000004868	ಸಾಮಾನ್ಯ	ರೋಟಾವೇಟರ್	52384
9	2021-22	ಧಾರವಾಡ	ಹುಬ್ಬಳ್ಳಿ ನಗರ	ಉಣಕಲ್	ಶಿವಪ್ಪ ನಾಗೋಜಿ	FID090600000766	ಸಾಮಾನ್ಯ	ಎಮ್.ಬಿ. ಪ್ಲೋ	46000
10	2021-22	ಧಾರವಾಡ	ಹುಬ್ಬಳ್ಳಿ ನಗರ	ಬೈರಿದೇವರಕೊಪ್ಪ	ರಾಮಪ್ಪ ಗುಂಡೂರ	FID0906000000049	ಸಾಮಾನ್ಯ	ಬಿತ್ತನೆ ಕೂರಿಗೆ	30744
11	2021-22	ಧಾರವಾಡ	ಹುಬ್ಬಳ್ಳಿ ನಗರ	ಉಣಕಲ್	ಶಾಂತಕುಮಾರಿ ಅಬ್ಬಯ್ಯ	FID0906000005593	ಸಾಮಾನ್ಯ	ಬಹುಬೆಳೆ ಒಕ್ಕಣೆ ಯಂತ್ರ	89000
12	2021-22	ಧಾರವಾಡ	ಹುಬ್ಬಳ್ಳಿ ನಗರ	ಕೇಶ್ವಾಪುರ	ಪರಶುರಾಮ ಬೆಕ್ಕಿನಕನ್ನವರ	FID0906000002473	ಪ.ಜಾ	ಮಿನಿ ಟ್ರ್ಯಾಕ್ಟರ್	300000
13	2021-22	ಧಾರವಾಡ	ಹುಬ್ಬಳ್ಳಿ ನಗರ	ಕೇಶ್ವಾಪುರ	ಮಾರುತಿ ಬೆಕ್ಕಿನಕನ್ನವರ	FID0903000004761	ಪ.ಜಾ	ಎಮ್.ಬಿ. ಪ್ಲೋ	82800
14	2021-22	ಧಾರವಾಡ	ಹುಬ್ಬಳ್ಳಿ ನಗರ	ಉಣಕಲ್	ಸುರೇಶ ಬಾಗಮ್ಮನವರ	FID0906000001314	ಪ.ಜಾ	ಎಮ್.ಬಿ. ಪ್ಲೋ	71550
15	2021-22	ಧಾರವಾಡ	ಹುಬ್ಬಳ್ಳಿ ನಗರ	ಗೋಪನಕೊಪ್ಪ	ಸಿದ್ದಪ್ಪ ತಳವಾರ	FID0906000002981	ಪ.ಪಂ	ರೋಟಾವೇಟರ್	94291
16	2021-22	ಧಾರವಾಡ	ಹುಬ್ಬಳ್ಳಿ ನಗರ	ಗೋಪನಕೊಪ್ಪ	ಹನುಮಂತಪ್ಪ ದಂಡಪ್ಪನವರ	FID0906000004088	ಪ.ಪಂ	ಬಹುಬೆಳೆ ಒಕ್ಕಣೆ ಯಂತ್ರ	100000
17	2022-23	ಧಾರವಾಡ	ಹುಬ್ಬಳ್ಳಿ ನಗರ	ಉಣಕಲ್ಲ	ನಿಂಗನಗೌಡ ಮ್ಯಾದಗೊಪ್ಪ	FID0906000001456	ಪ.ಪಂ	ಬಹುಬೆಳೆ ಒಕ್ಕಣೆ ಯಂತ್ರ	100000
18	2022-23	ಧಾರವಾಡ	ಹುಬ್ಬಳ್ಳಿ ನಗರ	ಬೈರಿದೇವರಕೊಪ್ಪ	ಮಂಜುನಾಥ ಮಟ್ಟಿ	FID0906000001164	ಸಾಮಾನ್ಯ	ಎಮ್.ಬಿ. ಪ್ಲೋ	70000
19	2022-23	ಧಾರವಾಡ	ಹುಬ್ಬಳ್ಳಿ ನಗರ	ಬೆಂಗೇರಿ	ಫೀರಪ್ಪ ಶಿಂದೋಗಿ	FID0906000003170	ಸಾಮಾನ್ಯ	ಎಮ್.ಬಿ. ಪ್ಲೋ	51698
20	2022-23	ಧಾರವಾಡ	ಹುಬ್ಬಳ್ಳಿ ನಗರ	ಗೋಪನಕೊಪ್ಪ	ಸಿದ್ದನಗೌಡ ಪಾಟೀಲ	FID0906000001935	ಸಾಮಾನ್ಯ	ಬಿತ್ತನೆ ಕೂರಿಗೆ	39000
21	2022-23	ಧಾರವಾಡ	ಹುಬ್ಬಳ್ಳಿ ನಗರ	ಬೈರಿದೇವರಕೊಪ್ಪ	ಲಕ್ಷ್ಮಣ ಪೂಜಾರ	FID0906000001167	ಸಾಮಾನ್ಯ	ಬಿತ್ತನೆ ಕೂರಿಗೆ	39000
22	2022-23	ಧಾರವಾಡ	ಹುಬ್ಬಳ್ಳಿ ನಗರ	ಗೋಪನಕೊಪ್ಪ	ಚಂದ್ರಶೇಖರ ಪಾಟೀಲ	FID0906000002426	ಸಾಮಾನ್ಯ	ಎಮ್.ಬಿ. ಪ್ಲೋ	51698
23	2022-23	ಧಾರವಾಡ	ಹುಬ್ಬಳ್ಳಿ ನಗರ	ಗೋಪನಕೊಪ್ಪ	ಉಮೇಶ ಸಂಶಿ	FID0906000002518	ಸಾಮಾನ್ಯ	ಎಮ್.ಬಿ. ಪ್ಲೋ	54000
24	2022-23	ಧಾರವಾಡ	ಹುಬ್ಬಳ್ಳಿ ನಗರ	ಬೆಂಗೇರಿ	ಫೀರಪ್ಪ ಶಿಂದೋಗಿ	FID0906000003170	ಸಾಮಾನ್ಯ	ಎಮ್.ಬಿ. ಪ್ಲೋ	54000
25	2022-23	ಧಾರವಾಡ	ಹುಬ್ಬಳ್ಳಿ ನಗರ	ಉಣಕಲ್ಲ	ಚನ್ನಪ್ಪ ಬಿ ನವಲಗುಂದ	FID0906000004096	ಸಾಮಾನ್ಯ	ರೋಟಾವೇಟರ್	60000
26	2022-23	ಧಾರವಾಡ	ಹುಬ್ಬಳ್ಳಿ ನಗರ	ಉಣಕಲ್ಲ	ಅಶೋಕ ಕೆ ಬೆನಕಟ್ಟಿ	FID0906000002553	ಸಾಮಾನ್ಯ	ರೋಟಾವೇಟರ್	60000
27	2022-23	ಧಾರವಾಡ	ಹುಬ್ಬಳ್ಳಿ ನಗರ	ಉಣಕಲ್ಲ	ವೀರನಗೌಡ ಹಳೆಮನಿ	FID0906000005845	ಸಾಮಾನ್ಯ	ಬಿತ್ತನೆ ಕೂರಿಗೆ	39000
28	2022-23	ಧಾರವಾಡ	ಹುಬ್ಬಳ್ಳಿ ನಗರ	ಬೈರಿದೇವರಕೊಪ್ಪ	ರಾಮಪ್ಪ ಗುಂಡೂರ	FID0906000000049	ಸಾಮಾನ್ಯ	ಬಿತ್ತನೆ ಕೂರಿಗೆ	39000
29	2022-23	ಧಾರವಾಡ	ಹುಬ್ಬಳ್ಳಿ ನಗರ	ಉಣಕಲ್ಲ	ರಾಮನಗೌಡ ಮ್ಯಾದಗೊಪ್ಪ	FID0906000001458	ಸಾಮಾನ್ಯ	ಎಮ್.ಬಿ. ಪ್ಲೋ	70000
30	2022-23	ಧಾರವಾಡ	ಹುಬ್ಬಳ್ಳಿ ನಗರ	ಬೆಂಗೇರಿ	ಗೋಲಪ್ಪ ಮೇಟಿ	FID0906000005890	ಸಾಮಾನ್ಯ	ಬಿತ್ತನೆ ಕೂರಿಗೆ	39000
31	2022-23	ಧಾರವಾಡ	ಹುಬ್ಬಳ್ಳಿ ನಗರ	ಬೈರಿದೇವರಕೊಪ್ಪ	ಬಸಪ್ಪ ಮಾದರ	FID0906000002322	ಸಾಮಾನ್ಯ	ಬಿತ್ತನೆ ಕೂರಿಗೆ	39000
32	2022-23	ಧಾರವಾಡ	ಹುಬ್ಬಳ್ಳಿ ನಗರ	ಅಮರಗೋಳ	ದೊಡ್ಡಬಸಪ್ಪ ತಳವಾರ	FID0906000000039	ಪ.ಜಾ	ಬಿತ್ತನೆ ಕೂರಿಗೆ	70200
33	2022-23	ಧಾರವಾಡ	ಹುಬ್ಬಳ್ಳಿ ನಗರ	ಉಣಕಲ್ಲ	ಸುರೇಶ ಭರ್ಮಣ್ಣವರ	FID0906000001314	ಪ.ಪಂ	ಬಿತ್ತನೆ ಕೂರಿಗೆ	70200
34	2023-24	ಧಾರವಾಡ	ಹುಬ್ಬಳ್ಳಿ ನಗರ	ಬೈರಿದೇವರಕೊಪ್ಪ	ಮಂಜುನಾಥ ಕೊಪ್ಪದ	FID0906000005394	ಪ.ಪಂ	ಬಿತ್ತನೆ ಕೂರಿಗೆ	70200
35	2023-24	ಧಾರವಾಡ	ಹುಬ್ಬಳ್ಳಿ ನಗರ	ಉಣಕಲ್	ಶಿವಾನಂದ ಪಾಗದ	FID0906000001457	ಸಾಮಾನ್ಯ	ಎಮ್.ಬಿ. ಪ್ಲೋ	70000
36	2023-24	ಧಾರವಾಡ	ಹುಬ್ಬಳ್ಳಿ ನಗರ	ಬೆಂಗೇರಿ	ಬಸವರಾಜ ಕನಗೊಂಡ	FID0906000003112	ಸಾಮಾನ್ಯ	ರೋಟಾವೇಟರ್	62250
37	2023-24	ಧಾರವಾಡ	ಹುಬ್ಬಳ್ಳಿ ನಗರ	ಬೈರಿದೇವರಕೊಪ್ಪ	ಫಕ್ಕೀರಪ್ಪ ಗುಂಡೂರ	FID0906000001147	ಸಾಮಾನ್ಯ	ಎಮ್.ಬಿ. ಪ್ಲೋ	51500
38	2023-24	ಧಾರವಾಡ	ಹುಬ್ಬಳ್ಳಿ ನಗರ	ಬೆಂಗೇರಿ	ನಾಗನಗೌಡ ಪಾಟೀಲ	FID0906000005468	ಸಾಮಾನ್ಯ	ಎಮ್.ಬಿ. ಪ್ಲೋ	70000
39	2023-24	ಧಾರವಾಡ	ಹುಬ್ಬಳ್ಳಿ ನಗರ	ಬೈರಿದೇವರಕೊಪ್ಪ	ನಿಂಗಪ್ಪ ಅಕ್ಕಿ	FID0906000003064	ಸಾಮಾನ್ಯ	ರೋಟಾವೇಟರ್	60000
40	2023-24	ಧಾರವಾಡ	ಹುಬ್ಬಳ್ಳಿ ನಗರ	ಗೋಪನಕೊಪ್ಪ	ಕಂಠಯ್ಯ ಮಠಪತಿ	FID0906000001466	ಸಾಮಾನ್ಯ	ಬಿತ್ತನೆ ಕೂರಿಗೆ	55000

ಜಂಟಿ ಕೃಷಿ [illegible]
ಕೃಷಿ ಯಾಂತ್ರೀಕರಣ ಮತ್ತು [illegible]
ಬೆಂಗಳೂರು.

ಕ್ರ.ಸಂ	ವರ್ಷ	ಜಿಲ್ಲೆ	ತಾಲೂಕ	ಗ್ರಾಮ	ರೈತರ ಹೆಸರು	ಎಫ್.ಐ.ಡಿ	ವರ್ಗ	ಉಪಕರಣದ ಹೆಸರು	ಸಹಾಯಧನ
41	2023-24	ಧಾರವಾಡ	ಹುಬ್ಬಳ್ಳಿ ನಗರ	ಉಣಕಲ್	ಸಿದ್ದಪ್ಪ ಪರಣ್ಣವರ	FID0906000002844	ಸಾಮಾನ್ಯ	ಬಿತ್ತನೆಕೂರಿಗೆ	37500
42	2023-24	ಧಾರವಾಡ	ಹುಬ್ಬಳ್ಳಿ ನಗರ	ಗೋಪನಕೊಪ್ಪ	ದೇವೇಂದ್ರಪ್ಪ ಹಳ್ಯಾಳ	FID0906000002533	ಸಾಮಾನ್ಯ	ಬಿತ್ತನೆಕೂರಿಗೆ	37500
43	2023-24	ಧಾರವಾಡ	ಹುಬ್ಬಳ್ಳಿ ನಗರ	ಉಣಕಲ್	ಸಿದ್ದಪ್ಪ ಶೆಲವಡಿ	FID0906000002556	ಸಾಮಾನ್ಯ	ಬಿತ್ತನೆಕೂರಿಗೆ	37500

ಜಂಟಿ ಕೃಷಿ ನಿರ್ದೇಶಕರು
ಧಾರವಾಡ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1894 ಗೆ ಅನುಬಂಧ-3

ಕೃಷಿ ಯಾಂತ್ರೀಕರಣ ಸಹಾಯಧನ ಯೋಜನೆಗಳಡಿ ವಿತರಿಸಲಾಗುವ ಕೃಷಿ ಯಂತ್ರೋಪಕರಣಗಳು

ಕ್ರ.ಸಂ.	ಕೃಷಿ ಯಂತ್ರೋಪಕರಣಗಳು
ಷೆಡ್ಯೂಲ್ - A – ಭೂಮಿ ಸಿದ್ಧತೆ ಉಪಕರಣಗಳು	
1	ಟ್ರಾಕ್ಟರ್
2	ಪವರ್ ಟಿಲ್ಲರ್ಸ್ (8 ಬಿ ಹೆಚ್ ಪಿ, ಮೇಲ್ಪಟ್ಟು)
3	ಎಂ.ಬಿ ಪ್ಲೋ
4	ರೋಟೋವೇಟರ್
5	ಡಿಸ್ಕ್ ಪ್ಲೋ
6	ಡಿಸ್ಕ್ ಹ್ಯಾರೋ
7	ಕಲ್ಟಿವೇಟರ್
8	ಲೆವೆಲರ್
9	ಕೇಜ್ ವೀಲ್
10	ಬ್ಲೇಡ್ ಹ್ಯಾರೋ
11	ಟ್ರಾಕ್ಟರ್ ಡ್ರಾನ್ ಸಬ್ ಸಾಯ್ಲರ್
12	ಲೇಸರ್ ಗೈಡೆಡ್ ಲ್ಯಾಡ್ ಲೇವೆಲರ್
13	ರೋಟರಿ ಪ್ಲೋ / ಪವರ್ ಹ್ಯಾರೋ
ಷೆಡ್ಯೂಲ್ - B - ಬಿತ್ತನೆ ಮತ್ತು ನಾಟಿ ಮಾಡುವ ಉಪಕರಣಗಳು	
14	ಸೆಲ್ಫ್ ಪ್ರೊಪೆಲ್ಡ್ ರೈಸ್ ಪ್ಲಾಂಟರ್ರ್ / ಪ್ಯಾಡಿ ಪ್ಲಾಂಟರ್
15	ಫರೋ ಒಪನರ್ / ರಿಡ್ಜರ್ / ಬಂಡ್ ಫರ್ಮಾರ್
16	ನ್ಯೂಮಾಟಿಕ್ / ವ್ಯಾಕುಂ ಪ್ರೆಸಿಷನ್ ಪ್ಲಾಂಟರ್
17	ಸೀಡ್ ಕಮ್ ಫರ್ಟಿಲೇಜರ್ ಡ್ರಿಲ್
18	ಜೀರೋ ಟಿಲ್ ಡ್ರೀಲ್
19	ಸೂಪರ್ ಸೀಡ್ ಡ್ರಿಲ್
20	ರಸಗೊಬ್ಬರ ಪ್ರಸಾರ / ಸ್ಪ್ರೆಡರ್
21	ಡೈರೆಕ್ಟ್ ರೈಸ್ ಸೀಡರ್
22	ಪೋಸ್ಟ್ ಹೋಲ್ ಡಿಗ್ಗರ್
23	ಮಲ್ಟಿ ಕ್ರಾಪ್ ಟ್ರಾನ್ಸ್ ಪ್ಲಾಂಟರ್
24	ಬ್ರಾಡ್ ಬೆಡ್ ಫರೋ ಪ್ಲಾಂಟರ್
ಷೆಡ್ಯೂಲ್ - C – ಅಂತರ ಬೇಸಾಯ ಕೃಷಿ ಉಪಕರಣಗಳು	
25	ಬ್ರಷ್ ಕಟ್ಟರ್
26	ಮಲ್ಟಿ ಪರ್ಪಸ್ 6 ಇನ್ 1 ಬ್ರಷ್ ಕಟ್ಟರ್
27	ಪವರ್ ವೀಡರ್ಸ್ (1.75 ಹೆಚ್ ಪಿ ಇಂದ 9 ಹೆಚ್ ಪಿ)
28	ರೋಟರಿ ಸ್ಲಾಶರ್
29	ಫ್ಲೇಲ್ ಮೂವರ್
ಷೆಡ್ಯೂಲ್ - D - ಟ್ರ್ಯಾಕ್ಟರ್ / ಪವರ್ ಟಿಲರ್ / ಪವರ್ ಆಪರೇಟೆಡ್ ಸಸ್ಯ ಸಂರಕ್ಷಣಾ ಉಪಕರಣಗಳು	
30	ನ್ಯಾಪ್‌ಸ್ಯಾಕ್ ಪವರ್ ಸ್ಪ್ರೇಯರ್
31	ಎಚ್‌ಡಿಪಿ / ಎಚ್‌ಟಿಪಿ ಸ್ಪ್ರೇಯರ್
32	ಟ್ರಾಕ್ಟರ್ ಚಾಲಿತ ಸ್ಪ್ರೇಯರ್
33	ಬೂಮ್ ಸ್ಪ್ರೇಯರ್
34	ಏರೋ ಬ್ಲಾಸ್ಟ್ ಸ್ಪ್ರೇಯರ್ / ಏರ್ ಅಸಿಸ್ಟೆಡ್ ಸ್ಪ್ರೇಯರ್
ಷೆಡ್ಯೂಲ್ E - ಕೊಯ್ಲು ಮತ್ತು ಒಕ್ಕಣೆ ಮಾಡುವ ಉಪಕರಣಗಳು	
35	ಬಹುಬೆಳೆ ಒಕ್ಕಣೆ ಯಂತ್ರ (ಮಲ್ಟಿ ಕ್ರಾಪ್ ಥ್ರೆಷರ್)
36	ಶೇಂಗಾ ಡಿಗ್ಗರ್ / ಶೇಂಗಾ ಡಿಗ್ಗರ್ ವಿತ್ ಎಲಿವೇಂಟರ್

ಜಂಟಿ ಕೃಷಿ ನಿರ್ದೇಶಕರು
ಕೃಷಿ ಯಾಂತ್ರೀಕರಣ ಮತ್ತು ಸೂಕ್ಷ್ಮ ನೀರಾವರಿ
ಬೆಂಗಳೂರು.

37	ಶೇಂಗಾ ಪಾಡ್ ಸ್ಟ್ರಿಪ್ಪರ್ / ಥ್ರೆಷರ್
38	ಮೇಜ್ ಶೆಲ್ಲರ್
39	ರೀಪರ್‌ಗಳು ಮತ್ತು ರೀಪರ್ ಕಮ್ ಬೈಂಡರ್
40	ಕಂಬೈನ್ಡ ಹಾರ್ವೆಸ್ಟರ್ಸ್ (ವ್ಹೀಲ್ ಟೈಪ್ / ಟ್ರ್ಯಾಕ್ ಟೈಪ್)
ಷೆಡ್ಯೂಲ್ F - ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಗಳು	
41	ಟ್ರಾಶ್ ಕಟ್ಟರ್ / ಮಲ್ಚರ್ ಶ್ರೆಡರ್
42	ಸಿಂಗಲ್ ರೋ ಮೊಬೈಲ್ ಶ್ರೆಡರ್
43	ಶ್ರೆಡರ್ (ಕೋಕೋನೇಟ್ ಫ್ರೊಂಡ್ ಚಾಪರ್)
44	ಟ್ರ್ಯಾಕ್ಟರ್ ಆಪರೇಟೆಡ್ ಬೇಲರ್
45	ಸ್ವಯಂ ಚಾಲಿತ ಲೋಡ್ ಕಾರ್ಟ್ (ವೀಲ್ ಬ್ಯಾರೋ)
46	ಚಾಫ್ ಕಟ್ಟರ್
47	ಪ್ಲಾಸ್ಟಿಕ್ ಮಲ್ಚ್ ಲೇಯಿಂಗ್ ಯಂತ್ರ
48	ರೈಸ್ ಸ್ಟ್ರಾ ಚಾಪರ್ ಕಮ್ ಸ್ಪ್ರೆಡರ್
49	ಸ್ಟಬ್ಬಲ್ ಶೇವರ್/ ರಟೂನ್ ಮ್ಯಾನೇಜರ್
50	ರೇಕ್
ಷೆಡ್ಯೂಲ್ G - ಕೋಯ್ಲೋತ್ತರ ಮತ್ತು ಕೃಷಿ ಸಂಸ್ಕರಣಾ ಉಪಕರಣಗಳು	
51	ದಾಲ್ ಪ್ರೊಸೆಸರ್
52	ಮಿನಿ ರೈಸ್ ಮಿಲ್ / ರೈಸ್ ಹಲ್ಲರ್
53	ಮಿನಿ ಆಯಿಲ್ ಎಕ್ಸ್‌ಪೆಲ್ಲರ್
54	ರಾಗಿ ಕ್ಲೀನಿಂಗ್ ಯಂತ್ರ (ಡೆಸ್ಟೋನರ್)
55	ಬೆಲ್ಲದ ಗಾಣ (ಶುಗರ್ ಕೇನ್ ಕ್ರಶೀಂಗ್ ಘಟಕ)
56	ಫ್ಲೋರ್ ಮಿಲ್ (2 ಹೆಚ್ ಪಿ ಯಿಂದ 10 ಹೆಚ್.ಪಿ)-ಹಿಟ್ಟಿನ ಗಿರಣಿ
57	ಪಲ್ವರೈಸರ್ (1 ಹೆಚ್ ಪಿ ಯಿಂದ 10 ಹೆಚ್.ಪಿ)-ಹಿಟ್ಟಿನ ಗಿರಣಿ
58	ರಾವಾ / ಕ್ಯಾಟಲ್ ಫೀಡ್ ಮೀಶಿನ್
59	ಚಿಲ್ಲಿ ಪೌಂಡಿಂಗ್ ಯಂತ್ರ-ಖಾರ ಪುಡಿ ಮಾಡುವ ಯಂತ್ರ
60	ಶಾವಿಗೆ / ವರ್ಮಿ ಸೆಲ್ಲಿ ಯಂತ್ರ
61	ಕಬ್ಬಿನ ಜ್ಯೂಸ್ ತಯಾರಿಸುವ ಯಂತ್ರ
62	ವೀಟ್ ಪಾಲಿಶರ್
63	ಪಾಪಾಡ್ / ರೋಟಿ ರೋಲಿಂಗ್ ಯಂತ್ರ
64	ಮೈನರ್ ಮಿಲೇಟ್ಸ್ ಡಿ-ಸ್ಟೋನರ್
65	ಮೈನರ್ ಮಿಲೇಟ್ಸ್ ಡಿ-ಹಲ್ಲರ್
ಷೆಡ್ಯೂಲ್ - H - ಡೀಸೆಲ್ / ಪೆಟ್ರೋಲ್ ಚಾಲಿತ ಪಂಪ್ ಸೆಟ್‌ಗಳು	
66	ಎಂಜಿನ್ ಚಾಲಿತ ಪಂಪ್ ಸೆಟ್‌ಗಳು (1.5 ರಿಂದ 10.00 ಹೆಚ್ ಪಿ)
67	ಟ್ರ್ಯಾಕ್ಟರ್ ಚಾಲಿತ ಪಂಪ್ ಸೆಟ್

LAQ-1894

ಅನುಬಂಧ-4

ರೈತರು ಕೃಷಿ ಇಲಾಖೆಯ ವಿವಿಧ ಯೋಜನೆಗಳ ಸೌಲಭ್ಯ ಪಡೆಯಲು ಅನುಸರಿಸುವ ಮಾನದಂಡಗಳು ಹಾಗೂ ಸಹಾಯಧನದ ವಿವರಗಳು

1. **ಬೀಜಗಳ ಪೂರೈಕೆ:** ಕೃಷಿ ಇಲಾಖೆಯ ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ ಯೋಜನೆಯಡಿ ರಾಜ್ಯದ ಎಲ್ಲಾ ವರ್ಗದ ರೈತರಿಗೆ ವಿವಿಧ ಕೃಷಿ ಬೆಳೆಗಳ (ಭತ್ತ, ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ, ತೊಗರಿ, ಕಡಲೆ, ಹೆಸರು, ಉದ್ದು, ಅಲಸಂದೆ, ನೆಲಗಡಲೆ, ಸೂರ್ಯಕಾಂತಿ, ಸೋಯಾ ಅವರೆ, ಹತ್ತಿ ಇತ್ಯಾದಿ) ಪ್ರಮಾಣಿತ/ ನಿಜ ಚೀಟಿ ಬಿತ್ತನೆ ಬೀಜಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ.50 ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75 ರ ರಿಯಾಯಿತಿ ದರದಲ್ಲಿ ವಿತರಣೆ ಮಾಡಲಾಗುತ್ತಿದೆ. ಒಟ್ಟಾರೆ ಗರಿಷ್ಟ 2.00 ಹೆಕ್ಟೇರ್ ಅಥವಾ ಅವರ ವಾಸ್ತವಿಕ ಹಿಡುವಳಿ (Actual holding) ಯಾವುದು ಕಡಿಮೆಯೋ ಆ ವಿಸ್ತೀರ್ಣಕ್ಕೆ ಮಾತ್ರ ರಿಯಾಯಿತಿಯಲ್ಲಿ ಬಿತ್ತನೆ ಬೀಜ ವಿತರಣೆ ಮಾಡಲಾಗುತ್ತಿದೆ. ಬಿತ್ತನೆ ಬೀಜ ವಿತರಣೆಯಲ್ಲಿ ರೈತರ ಪಹಣಿಯಲ್ಲಿನ ವಿವರಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಪರಿಶಿಷ್ಟ ವರ್ಗ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ರೈತರು ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾಗುತ್ತದೆ. ರೈತರು Farmer Registration & Unified Beneficiary Information System - FRUITS ಪೋರ್ಟಲ್ ನಲ್ಲಿ ನೋಂದಣಿಯಾಗಿ Farmers Identification number(FID) ಪಡೆದಿರಬೇಕು.

2. **ಸಸ್ಯ ಸಂರಕ್ಷಣೆ:** ಶೇ.50ರ ಸಹಾಯಧನದಡಿ ಪೀಡೆನಾಶಕ/ ಜೈವಿಕ ಪೀಡೆನಾಶಕ ಹಾಗೂ ಜೈವಿಕ ನಿಯಂತ್ರಣಕಾರಕಗಳ ವಿತರಣೆ, ಬೀಜೋಪಚಾರ ಆಂದೋಲನ ಹಾಗೂ ಸುರಕ್ಷಿತ ಕೀಟನಾಶಕಗಳ ಬಳಕೆ ಬಗ್ಗೆ ತರಬೇತಿಗಾಗಿ ಅನುದಾನವನ್ನು ಬಳಸಿಕೊಳ್ಳಲಾಗುತ್ತಿದೆ. ರೈತರು Farmer Registration & Unified Beneficiary Information System - FRUITS ಪೋರ್ಟಲ್ ನಲ್ಲಿ ನೋಂದಣಿಯಾಗಿ Farmers Identification number(FID) ಪಡೆದಿರಬೇಕು.

3. **ಕೃಷಿ ಯಾಂತ್ರೀಕರಣ & ಕೃಷಿ ಸಂಸ್ಕರಣೆ:**

   ಕೃಷಿ ಯಾಂತ್ರೀಕರಣ: ರೈತರು ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುವುದಕ್ಕೆ ಅನುವು ಮಾಡಿಕೊಡಲು ಹಾಗೂ ಕೂಲಿ ಕಾರ್ಮಿಕರ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು, ಈ ಯೋಜನೆಯಡಿ ಕೃಷಿ ಯಂತ್ರೋಪಕರಣಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50 ಹಾಗೂ ಪ.ಜಾ./ಪ.ಪಂ. ರೈತರಿಗೆ ಶೇ.90 ರಂತೆ ಎಲ್ಲಾ ವರ್ಗದ ರೈತರಿಗೆ ಗರಿಷ್ಠ ರೂ.1.00 ಲಕ್ಷಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ಒದಗಿಸಲಾಗುತ್ತದೆ ಹಾಗೂ 45 ಪಿ.ಟಿ.ಒ ಹೆಚ್.ಪಿ ವರೆಗಿನ ಟ್ರಾಕ್ಟರ್ ಗಳಿಗೆ ಸಾಮಾನ್ಯ ವರ್ಗದ ರೈತರಿಗೆ ರೂ.0.75 ಲಕ್ಷ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರ ಗರಿಷ್ಠ ರೂ.3.00 ಲಕ್ಷ ಸಹಾಯಧನ ನೀಡಲಾಗುತ್ತಿದೆ.

   ಕೃಷಿ ಸಂಸ್ಕರಣೆ: ಈ ಯೋಜನೆಯಡಿ ಕೃಷಿ ಸಂಸ್ಕರಣಾ ಘಟಕಗಳು, ಟಾರ್ಪಾಲಿನ್ ಮತ್ತು ಸಣ್ಣ ಯಂತ್ರಚಾಲಿತ ಎಣ್ಣೆಗಾಣ ಘಟಕಗಳನ್ನು ಸಹಾಯಧನದಡಿ ರೈತರಿಗೆ ವಿತರಿಸಲಾಗುತ್ತಿದೆ. ಸದರಿ ಯೋಜನೆಯಡಿ ಕೃಷಿ ಸಂಸ್ಕರಣಾ ಘಟಕಗಳು ಮತ್ತು ಟಾರ್ಪಾಲಿನ್ ಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50ರಷ್ಟು ಮತ್ತು ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.90ರಷ್ಟು ಸಹಾಯಧನದಡಿ ನೀಡಲಾಗುವುದು. ಸಣ್ಣ ಯಂತ್ರಚಾಲಿತ ಎಣ್ಣೆಗಾಣ ಘಟಕಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ.75 ಹಾಗೂ ಪ.ಜಾ./ಪ.ಪಂ., ರೈತರಿಗೆ ಶೇ.90 ರಂತೆ ಎಲ್ಲಾ ವರ್ಗದ ರೈತರಿಗೆ ಗರಿಷ್ಠ ರೂ.1.00 ಲಕ್ಷಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ಒದಗಿಸಲಾಗುತ್ತಿದೆ.

ಜಂಟಿ ಕೃಷಿ ನಿರ್ದೇಶಕರು
ಕೃಷಿ ಯಾಂತ್ರೀಕರಣ ಮತ್ತು ಸೂಕ್ಷ್ಮ ನೀರಾವರಿ
ಬೆಂಗಳೂರು.

ಇದಕ್ಕಾಗಿ Farmer Registration and Unified Beneficiary Information System - FRUITS ಪೋರ್ಟಲ್ ನಲ್ಲಿ ನೋಂದಣಿಯಾಗಿ Farmers Identification number (FID) ಪಡೆಯಬೇಕು. ರೈತರು ನಿಗದಿತ ಅರ್ಜಿ ನಮೂನೆಯಲ್ಲಿ ಆರ್.ಟಿ.ಸಿ. ಯೊಂದಿಗೆ ರೈತ ಸಂಪರ್ಕ ಕೇಂದ್ರದಲ್ಲಿ ಅರ್ಜಿ ಸಲ್ಲಿಸಬೇಕು ಹಾಗೂ ಕೆ-ಕಿಸಾನ್ ತಂತ್ರಾಂಶದಲ್ಲಿ ಅರ್ಜಿಯನ್ನು ಅಪ್‌ಲೋಡ್ ಮಾಡಬೇಕಾಗುತ್ತದೆ. ಅರ್ಜಿ ಸಲ್ಲಿಸಿದ ಎಲ್ಲಾ ಅರ್ಹ ರೈತರಿಗೆ ಜೇಷ್ಠತೆ ಹಾಗೂ ಅನುದಾನ ಲಭ್ಯತೆಯ ಆಧಾರದ ಮೇರೆಗೆ ಮಾರ್ಗಸೂಚಿ ಅನ್ವಯ ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ ಒದಗಿಸಲಾಗುತ್ತಿದೆ. ರಾಜ್ಯದ ಎಲ್ಲಾ ರೈತರಿಗೂ ಯಂತ್ರೋಪಕರಣ/ಕೃಷಿ ಸಂಸ್ಕರಣಾ ಘಟಕಗಳ ಯೋಜನೆಯ ಸೌಲಭ್ಯ ನೀಡುವ ದೃಷ್ಟಿಯಿಂದ, ಒಮ್ಮೆ ಕೃಷಿ ಯಂತ್ರೋಪಕರಣ/ಕೃಷಿ ಸಂಸ್ಕರಣಾ ಘಟಕಗಳ ಸೌಲಭ್ಯ ಪಡೆದ ರೈತರು 7 ವರ್ಷಗಳ ನಂತರ ಮತ್ತು ಕೃಷಿ ಸಂಸ್ಕರಣಾ ಕಾರ್ಯಕ್ರಮದಡಿ ಟಾರ್ಪಲಿನ್ ಸೌಲಭ್ಯ ಪಡೆದ ರೈತರು 3 ವರ್ಷಗಳ ನಂತರ ಮತ್ತೆ ಸದರಿ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

4. **ರೈತ ಸಿರಿ & ಸಾವಯವ ಕೃಷಿ:**ರೈತ ಸಿರಿ ಕಾರ್ಯಕ್ರಮದಡಿ ಸಿರಿಧಾನ್ಯಗಳ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಮತ್ತು ರೈತರ ಆದಾಯವನ್ನು ಹೆಚ್ಚಿಸಲು ಸಿರಿಧಾನ್ಯಗಳಾದ ನವಣೆ, ಹಾರಕ, ಕೊರಲೆ, ಸಾಮೆ, ಊದಲು, ಬರಗು ಬೆಳೆಗಳನ್ನು ಬೆಳೆದ ಎಲ್ಲಾ ವರ್ಗದ ರೈತರಿಗೆ ಪ್ರತಿ ಹೆಕ್ಟೇರಿಗೆ ರೂ.10000/-ದಂತೆ ಗರಿಷ್ಠ ಎರಡು ಹೆಕ್ಟೇರುಗಳಿಗೆ ಬೆಳೆ ಸಮೀಕ್ಷೆ ಆಧಾರದ ಮೇರೆಗೆ ಪ್ರೋತ್ಸಾಹಧನವನ್ನು ನೇರ ನಗದು ವರ್ಗಾವಣೆ ಮೂಲಕ ನೀಡಲಾಗುತ್ತದೆ.

   ಸಿರಿಧಾನ್ಯಗಳ ಸಂಸ್ಕರಣೆಗೆ ಉತ್ತೇಜನ ನೀಡುವ ಉದ್ದೇಶದೊಂದಿಗೆ ಸಿರಿಧಾನ್ಯಗಳ ಸಂಸ್ಕರಣೆ, ಮೌಲ್ಯವರ್ಧನೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರ್ಯಾಂಡಿಂಗ್ ಯಂತ್ರೋಪಕರಣಗಳಿಗೆ ಒಟ್ಟು ಯಂತ್ರೋಪಕರಣಗಳ ವೆಚ್ಚದ ಮೇಲೆ ಶೇ.50 ರಷ್ಟು ಅಥವಾ ಗರಿಷ್ಠ ರೂ.10.00 ಲಕ್ಷಗಳವರೆಗೆ ಸಹಾಯಧನವನ್ನು ನೀಡುತ್ತಿದ್ದು, ಆಸಕ್ತ ರೈತರು/ರೈತ ಗುಂಪುಗಳು/ರೈತ ಉತ್ಪಾದಕಾ ಗುಂಪುಗಳು/ ನವೋದ್ಯಮಿಗಳು/ ಸಾರ್ವಜನಿಕ ಉದ್ದಿಮೆಗಳು ಪ್ರಸ್ತಾನೆ ಸಲ್ಲಿಸಿ ಯೋಜನೆಯ ಪ್ರಯೋಜನ ಪಡೆದುಕೊಳ್ಳಬಹುದಾಗಿರುತ್ತದೆ.

5. **ಸಾವಯವ ಇಂಗಾಲ ಅಭಿಯಾನ:** ರಾಜ್ಯದ ಕೃಷಿ ಭೂಮಿಯಲ್ಲಿ ಸಾವಯವ ಇಂಗಾಲದ ಪ್ರಮಾಣವನ್ನು ಹೆಚ್ಚಿಸಲು, ದ್ವಿದಳಧಾನ್ಯಗಳ ವಿಸ್ತೀರ್ಣ ಮತ್ತು ಉತ್ಪಾದನೆ ಹೆಚ್ಚಿಸುವ ಸಲುವಾಗಿ ಶೇ. 75ರ ರಿಯಾಯಿತಿ ದರದಲ್ಲಿ ಹಸಿರೆಲೆ ಗೊಬ್ಬರ ಬಿತ್ತನೆ ಬೀಜಗಳ ವಿತರಣೆ ಮಾಡಲಾಗುತ್ತಿದೆ. ರೈತರು Farmer Registration & Unified Beneficiary Information System - FRUITS ಪೋರ್ಟಲ್ ನಲ್ಲಿ ನೋಂದಣಿಯಾಗಿ Farmers Identification number(FID) ಪಡೆದಿರಬೇಕು.

6. **ಹೊಸ ಬೆಳೆ ವಿಮಾ ಯೋಜನೆ:** ಈ ಯೋಜನೆಯಡಿ ಪ್ರವಾಹ, ಅನಾವೃಷ್ಟಿ, ಅಕಾಲಿಕ ಮಳೆ ಮತ್ತು ಇತರೆ ನೈಸರ್ಗಿಕ ವಿಕೋಪಗಳಿಂದ ಯಾವುದೇ ಅಧಿಸೂಚಿತ ಬೆಳೆ ವಿಫಲವಾದ ಪಕ್ಷದಲ್ಲಿ ರೈತರಿಗೆ ವಿಮಾ ರಕ್ಷಣೆ ಮತ್ತು ಹಣಕಾಸು ಬೆಂಬಲ ನೀಡಲಾಗುವುದು. ರೈತರಿಗೆ ನೀಡುವ ವಿಮಾ ಕಂತಿನ ರಿಯಾಯಿತಿಯಲ್ಲಿ ರಾಜ್ಯ ಸರ್ಕಾರದ ಪಾಲನ್ನು ನೀಡಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಅನುವು ಮಾಡಲಾಗುತ್ತಿದೆ.

   ಈ ಯೋಜನೆಯಡಿ ಮುಖ್ಯ ಬೆಳೆಗಳನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಹಾಗೂ ಇತರೆ ಬೆಳೆಗಳನ್ನು ಹೋಬಳಿ ಮಟ್ಟದಲ್ಲಿ ಪ್ರಥಮವಾಗಿ ಅಧಿಸೂಚಿಸಲಾಗುತ್ತದೆ. ಅಂತಿಮ ದಿನಾಂಕದೊಳಗೆ ರೈತರಿಂದ ಪ್ರೀಮಿಯಂ ಪಡೆದು ಬ್ಯಾಂಕ್ / ಸಹಕಾರ ಸಂಸ್ಥೆ / ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ಬೆಳೆ ವಿಮೆ ನೋಂದಣಿ ಕಾರ್ಯ ಕೈಗೊಳ್ಳಲಾಗುತ್ತದೆ ದಾಖಲೆಗಳನ್ನು ಪರಿಶೀಲಿಸಿ ಅರ್ಹ ರೈತರ ಪ್ರಸ್ತಾವನೆಗಳನ್ನು ಸಂಬಂಧಿಸಿದ ವಿಮಾ ಸಂಸ್ಥೆಗಳಿಗೆ

ಅಂಗೀಕರಿಸಲು ರವಾನಿಸಲಾಗುತ್ತದೆ. ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯು ಕ್ಷೇತ್ರಾಧಾರಿತ ಹಾಗೂ ಇಳುವರಿ ಆಧಾರಿತ ಯೋಜನೆಯಾಗಿದ್ದು, ಮಾರ್ಗಸೂಚಿಯನುಸಾರ ಹೋಬಳಿ / ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರು ನೀಡುವ ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ವಾಸ್ತವಿಕ ಇಳುವರಿ ಮಾಹಿತಿಯು ನಿಗದಿಪಡಿಸಲಾದ ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇದ್ದರೆ, ಇಳುವರಿಯ ಕೊರತೆಗನುಗುಣವಾಗಿ ಹೋಬಳಿ/ ಗ್ರಾಮ ಪಂಚಾಯಿತಿಯಲ್ಲಿ ಬೆಳೆ ವಿಮೆ ಮಾಡಿಸಿದ ಎಲ್ಲಾ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಅರ್ಹರಾಗುತ್ತಾರೆ. ಅರ್ಹ ರೈತರಿಗೆ ವಿಮೆ ಪರಿಹಾರ ಮೊತ್ತವನ್ನು ನೇರವಾಗಿ ಅವರ ಆಧಾರ್ ಜೋಡಿತ ಬ್ಯಾಂಕ್ ಖಾತೆಗೆ ವಿಮಾ ಸಂಸ್ಥೆಯವರಿಂದ ಇತ್ಯರ್ಥಪಡಿಸಲಾಗುತ್ತದೆ.

7. **ಬೆಳೆ ಸಮೀಕ್ಷೆ:** ಪೂರ್ವ ಮುಂಗಾರು, ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಬೆಳೆ ಸಮೀಕ್ಷೆ ಕೈಗೊಂಡ ಖಾಸಗಿ ನಿವಾಸಿಗಳಿಗೆ ಕೇಂದ್ರೀಕೃತ DBT k2 ಮೂಲಕ ಆಧಾರ್ ಆಧಾರಿತ ನೇರ ಗೌರವಧನ ಪಾವತಿ, ಮಾಸ್ಟರ್ ತರಬೇತುದಾರರು ಹಾಗೂ ಜಿಲ್ಲಾ ತಾಂತ್ರಿಕ ಸಲಹೆಗಾರರ ಗೌರವಧನ, ಬೆಳೆ ಸಮೀಕ್ಷೆ ಕುರಿತು ತರಬೇತಿ, ಕಾರ್ಯಾಗಾರ ಆಯೋಜನೆ, ವಿವಿಧ ಮಾಧ್ಯಮಗಳ ಮೂಲಕ ಜಾಹೀರಾತು, ಮುದ್ರಣ, ಸಿ.ಡಿ. ದಾಖಲಾತಿ, ವಿದ್ಯುನ್ಮಾನ ಮತ್ತು ವಿವಿಧ ಮಾಧ್ಯಮಗಳ ಮುಖಾಂತರ ಪ್ರಚಾರಕ್ಕಾಗಿ ತಗಲುವ ವೆಚ್ಚ, ಹೆಲ್ಪ್ ಡೆಸ್ಕ್ ಸಿಬ್ಬಂದಿ ವೇತನ ಹಾಗೂ ತಂತ್ರಾಂಶ ನಿರ್ವಹಣೆ ವೆಚ್ಚ, ಶೇ. 1ರಷ್ಟು ದತ್ತಾಂಶದ ಪರಿಶೀಲನೆ ಕೈಗೊಳ್ಳುವ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ಸಿಬ್ಬಂದಿಗಳಿಗೆ ಗೌರವಧನ, ಬೆಳೆ ಸಮೀಕ್ಷೆ ಕಾರ್ಯತಂಡ ನಿರ್ವಹಣೆ, ಇತರೆ ಕಛೇರಿ ಮತ್ತು ಆಡಳಿತಾತ್ಮಕ ವೆಚ್ಚಕ್ಕಾಗಿ ಅನುದಾನವನ್ನು ಉಪಯೋಗಿಸಲಾಗುತ್ತದೆ. ಪಹಣಿ ಹೊಂದಿರುವ ಎಲ್ಲಾ ಹಿಡುವಳಿದಾರರು ಅರ್ಹರಿರುತ್ತಾರೆ.

8. **ಮುಖ್ಯಮಂತ್ರಿಗಳ ರೈತ ವಿದ್ಯಾನಿಧಿ:** ಎಸ್.ಎಸ್.ಎಲ್.ಸಿ/ 10ನೇ ತರಗತಿಯನ್ನು ಪೂರೈಸಿರುವ ಹಾಗೂ ರಾಜ್ಯದ ಯಾವುದೇ ಭಾಗದಲ್ಲಿ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆ/ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್ ಗಳವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ರೈತರ ಮಕ್ಕಳಿಗೆ ಹಾಗೂ ಭೂರಹಿತ ಕೃಷಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ ಮಾಡಲಾಗುತ್ತಿದೆ.

ಸದರಿ ಯೋಜನೆಯಡಿ:-

- 8, 9 ಮತ್ತು 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ರೈತ ಕುಟುಂಬದ ಹೆಣ್ಣು ಮಕ್ಕಳು ಮತ್ತು ಎಸ್.ಎಸ್.ಎಲ್.ಸಿ /10ನೇ ತರಗತಿಯನ್ನು ಪೂರೈಸಿರುವ ಹಾಗೂ ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿರುವ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣಸಂಸ್ಥೆ/ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್-ಗಳವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ರೈತರ ಮಕ್ಕಳು ಹಾಗೂ ಭೂರಹಿತ ಕೃಷಿ ಕಾರ್ಮಿಕರ ಮಕ್ಕಳು ಈ ವಿದ್ಯಾರ್ಥಿವೇತನ ಪಡೆಯಲು ಅರ್ಹರಿರುತ್ತಾರೆ.

- ರೈತ ಕುಟುಂಬದ ಎಲ್ಲಾ ಮಕ್ಕಳು 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ವಿದ್ಯಾರ್ಥಿವೇತನ ಪಡೆಯಲು ಅರ್ಹರಿರುತ್ತಾರೆ. ಸದರಿ ಉದ್ದೇಶಕ್ಕೆ ರೈತ ಎಂದರೆ ರಾಜ್ಯದ ಯಾವುದೇ ಭಾಗದಲ್ಲಿ ಉಳುಮೆ ಮಾಡುವಂತಹ/ ಕೃಷಿ ಮಾಡುವಂತಹ ಜಮೀನನ್ನು ತನ್ನ ಹೆಸರಿನಲ್ಲಿ ಹೊಂದಿರುವಂತಹ ವ್ಯಕ್ತಿ (ಕೃಷಿ ಇಲಾಖೆಯ FRUITS ತಂತ್ರಾಂಶದಲ್ಲಿ ಭೂಸಹಿತ FID ಸಂಖ್ಯೆ ಹೊಂದಿರಬೇಕು). ಕೃಷಿ ಕಾರ್ಮಿಕರು ಎಂದರೆ ಕೃಷಿ ಇಲಾಖೆಯ FRUITS ತಂತ್ರಾಂಶದಲ್ಲಿ ಭೂರಹಿತ FID ಸಂಖ್ಯೆ ಹೊಂದಿದ್ದು MGNREGA ಉದ್ಯೋಗ ಚೀಟಿ ಹೊಂದಿರಬೇಕು. ರೈತ ಕುಟುಂಬ ಎಂದರೆ ರಾಜ್ಯದ ಇ-ಆಡಳಿತ ಇಲಾಖೆಯು

ನಿರ್ವಹಿಸುತ್ತಿರುವ "ಕುಟುಂಬ" ತಂತ್ರಾಂಶದ ದತ್ತಾಂಶದಲ್ಲಿ ದಾಖಲಾಗಿರುವ ಸದಸ್ಯರು.

- ಪುನರಾವರ್ತಿತ ವಿದ್ಯಾರ್ಥಿಗಳು ಹಾಗೂ ಇತರೆ ಯಾವುದೇ ಇಲಾಖೆಯು ನೀಡುವ ವಿದ್ಯಾರ್ಥಿ ವೇತನ ಪಡೆಯುತ್ತಿರುವ ವಿದ್ಯಾರ್ಥಿಗಳು 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ವಿದ್ಯಾರ್ಥಿವೇತನ ಪಡೆಯಲು ಅರ್ಹರಿರುವುದಿಲ್ಲ.

9. ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ ಪ್ರಶಸ್ತಿ:

ಕೃಷಿ ಪಂಡಿತ ಪ್ರಶಸ್ತಿ: ಕೃಷಿ ಕ್ಷೇತ್ರದಲ್ಲಿ ವಿನೂತನ ಅನ್ವೇಷಣೆ ಮತ್ತು ಸೃಜನಾತ್ಮಕ ಕಾರ್ಯಗಳಿಂದ ಗಮನಾರ್ಹ ಸಾಧನೆ ಮಾಡಿರುವ ಮತ್ತು ರೈತ ಸಮುದಾಯದ ಅಭಿವೃದ್ಧಿಗಾಗಿ ಕೊಡುಗೆ ನೀಡುತ್ತಿರುವ ರೈತ ಮತ್ತು ರೈತ ಮಹಿಳೆಯರಿಗೆ ಕೃಷಿ ಪಂಡಿತ ಪ್ರಶಸ್ತಿ ನೀಡಲಾಗುತ್ತಿದೆ. ಈ ಹಿಂದೆ ಕೃಷಿ ಪಂಡಿತ ಪ್ರಶಸ್ತಿ (ಪ್ರಥಮ/ ದ್ವಿತೀಯ/ ತೃತೀಯ/ ಉದಯೋನ್ಮುಖ) ಪಡೆದವರು ಹೊರತುಪಡಿಸಿ ಉಳಿದೆಲ್ಲಾ ರೈತ ಮತ್ತು ರೈತ ಮಹಿಳೆಯರು ಕೃಷಿ ಪಂಡಿತ ಪ್ರಶಸ್ತಿಗೆ ಸ್ಪರ್ಧಿಸಬಹುದಾಗಿರುತ್ತದೆ.

ಕೃಷಿ ಪ್ರಶಸ್ತಿ: ಕೃಷಿ ಕ್ಷೇತ್ರದಲ್ಲಿ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ರೈತರಲ್ಲಿ ಆರೋಗ್ಯಕರ ಸ್ಪರ್ಧಾ ಮನೋಭಾವನೆಯನ್ನು ಉಂಟು ಮಾಡಿ ಅತಿ ಹೆಚ್ಚು ಇಳುವರಿ ಪಡೆಯುವ ರೈತ ಮತ್ತು ರೈತ ಮಹಿಳೆಯರಿಗೆ ಕೃಷಿ ಪ್ರಶಸಿಯನ್ನು ನೀಡಲಾಗುತ್ತಿದೆ. ಕಳೆದ ಐದು ವರ್ಷಗಳಲ್ಲಿ ಬೆಳೆ ಸ್ಪರ್ಧೆಯಡಿ ವಿಜೇತರಾದವರನ್ನು ಹೊರತುಪಡಿಸಿ ಉಳಿದೆಲ್ಲಾ ರೈತರು ಕೃಷಿ ಪ್ರಶಸ್ತಿಗೆ ಸ್ಪರ್ಧಿಸಬಹುದಾಗಿರುತ್ತದೆ.

10. ತರಬೇತಿ ಕಾರ್ಯಕ್ರಮಗಳು: ಈ ಯೋಜನೆಯಡಿ ಕೃಷಿ ವಿಸ್ತರಣಾ ಅಧಿಕಾರಿಗಳ ನಿರ್ವಹಣಾ ಸಾಮರ್ಥ್ಯ ಮತ್ತು ರೈತರ/ ರೈತ ಮಹಿಳೆಯರ ವೃತ್ತಿ ಸಾಮರ್ಥ್ಯವನ್ನು ಹೆಚ್ಚಿಸಲು ಕೃಷಿ ತಾಂತ್ರಿಕತೆಗಳಿಗೆ ಸಂಬಂಧಿಸಿದಂತೆ ವಿಶೇಷ ತರಬೇತಿಗಳನ್ನು ಹಾಗೂ ಅಧ್ಯಯನ ಪ್ರವಾಸಗಳನ್ನು ಆಯೋಜಿಸಲಾಗುತ್ತದೆ.

11. ಕೃಷಿ ಭಾಗ್ಯ: ಮಳೆಯಾಶ್ರಿತ ಕೃಷಿ ನೀತಿ, 2014 ರನ್ವಯ 2024-25 ನೇ ಸಾಲಿನಲ್ಲಿ ರಾಜ್ಯದ 5 ಒಣ ಹವಾಮಾನ ವಲಯಗಳ 24 ಬರ ಪೀಡಿತ ಜಿಲ್ಲೆಗಳಲ್ಲಿನ 106 ತಾಲ್ಲೂಕುಗಳಲ್ಲಿ ಪ್ಯಾಕೇಜ್ ಮಾದರಿಯಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ರಾಜ್ಯದ ಮಳೆಯಾಶ್ರಿತ ಕೃಷಿಯನ್ನು ಸುಸ್ಥಿರ ಕೃಷಿಯನ್ನಾಗಿ ರೂಪಾಂತರಗೊಳಿಸುವುದು, ಸಮರ್ಪಕ ಮಳೆ ನೀರಿನ ಸಂಗ್ರಹಣೆ ಹಾಗೂ ಉಪಯುಕ್ತ ಬಳಕೆ ಪದ್ಧತಿಯಿಂದ ಕೃಷಿ ಉತ್ಪಾದಕತೆಯನ್ನು ಉತ್ತಮ ಪಡಿಸುವುದು ಮತ್ತು ಆದಾಯವನ್ನು ಹೆಚ್ಚಿಸುವುದು. ಮಳೆ ನೀರನ್ನು ವ್ಯರ್ಥ ಮಾಡದೆ ಆಯ್ದ ಸ್ಥಳದಲ್ಲಿ ಕೃಷಿ ಹೊಂಡ ತೆಗೆದು ಜಲ ಸಂಗ್ರಹಿಸಿ, ಬೆಳೆಗಳ ಸಂದಿಗ್ಧ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಕೃಷಿ ಭಾಗ್ಯ ಯೋಜನೆಯಡಿ ಕ್ಷೇತ್ರ ಬದು ನಿರ್ಮಾಣ, ನೀರು ಸಂಗ್ರಹಣಾ ರಚನೆ (ಕೃಷಿ ಹೊಂಡ), ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ, ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ (GI Wire Fencing), ಹೊಂಡದಿಂದ ನೀರು ಎತ್ತಲು ಡೀಸೆಲ್/ಪೆಟ್ರೋಲ್/ಸೋಲಾರ್ ಪಂಪ್ ಸೆಟ್, ನೀರನ್ನು ಬೆಳೆಗೆ ಹಾಯಿಸಲು ಸೂಕ್ಷ್ಮ(ತುಂತುರು/ಹನಿ) ನೀರಾವರಿ ಘಟಕಗಳನ್ನು ಒದಗಿಸಲಾಗುತ್ತಿದೆ. ಈ ಯೋಜನೆಯಡಿ ಎಲ್ಲಾ ಘಟಕಗಳಿಗೆ (ತಂತಿ ಬೇಲಿ ಹೊರತುಪಡಿಸಿ) ಸಾಮಾನ್ಯ ವರ್ಗದ ರೈತರಿಗೆ ಶೇ.80 ಹಾಗೂ ಪ.ಜಾ./ಪ.ಪಂ. ರೈತರಿಗೆ ಶೇ.90 ರಂತೆ ಸಹಾಯಧನವನ್ನು ಒದಗಿಸಲಾಗುತ್ತದೆ (ಷರಾ: ತಂತಿ ಬೇಲಿ ಘಟಕಕ್ಕೆ ಸಾಮಾನ್ಯ ವರ್ಗದ ರೈತರಿಗೆ ಶೇ.40 ಹಾಗೂ ಪ.ಜಾ./ಪ.ಪಂ. ರೈತರಿಗೆ ಶೇ.50 ರಂತೆ ಸಹಾಯಧನ).

ಫಲಾನುಭವಿಯ ಆಯ್ಕೆ ಮಾನದಂಡಗಳು:

- ಕ್ಷೇತ್ರ ಪರಿಶೀಲನೆಯಲ್ಲಿ ಅರ್ಹಗೊಂಡ ರಾಜ್ಯದ 5 ಕೃಷಿ ಹವಾಮಾನ ಒಣ ವಲಯದ (ಅಚ್ಚು ಕಟ್ಟು ಪ್ರದೇಶ ಹೊರತುಪಡಿಸಿ) ಎಲ್ಲಾ ಆಸಕ್ತ ರೈತರು ಯೋಜನೆಗೆ ಅರ್ಹರಾಗಿರುತ್ತಾರೆ.
- ರೈತರ ಒಟ್ಟು ಸಾಗುವಳಿ ಕ್ಷೇತ್ರದ ಒಂದು ಸರ್ವೆ ನಂಬರ್ ನಲ್ಲಿ ಕನಿಷ್ಠ 1 ಎಕರೆ ಇರಬೇಕು (single land parcel).
- ಕೃಷಿ ಭಾಗ್ಯ ಯೋಜನೆಯ ಪೂರ್ಣ ಪ್ಯಾಕೇಜ್‌ನ ಘಟಕಗಳನ್ನು ಅನುಷ್ಠಾನಗೊಳಿಸಲು ಆಸಕ್ತಿಯಿರುವಂತಹ ರೈತರನ್ನು ಮಾತ್ರ ಆಯ್ಕೆ ಮಾಡಿ ಕ್ಷೇತ್ರ ಪರಿಶೀಲನೆ ಕೈಗೊಳ್ಳಲಾಗುವುದು.
- ಹಿಂದಿನ ಸಾಲುಗಳಲ್ಲಿ ಕೃಷಿ ಭಾಗ್ಯ ಯೋಜನೆ ಅಥವ ಇನ್ಯಾವುದೇ ಯೋಜನೆಯಡಿ ಕೃಷಿ ಹೊಂಡ ಫಲಾನುಭವಿಯಾಗಿರುವ ರೈತರು ಸದರಿ ಯೋಜನೆಗೆ ಅರ್ಹತೆ ಹೊಂದಿರುವುದಿಲ್ಲ
- ಪರಿಶಿಷ್ಠ ಜಾತಿ/ಪ.ಪಂಗಡ ರೈತರು ಸರ್ಕಾರದ ನಿರ್ದಿಷ್ಟ ಅನುಪಾತದನ್ವಯ ಅರ್ಹರಾಗಿರುತ್ತಾರೆ.

12. **ಹೈಟೆಕ್ ಹಾರ್ವೆಸ್ಟರ್ ಹಬ್**- ಬೆಳೆ ಕಟಾವು ಪ್ರಕ್ರಿಯೆಯನ್ನು ನಿಗದಿತ ಸಮಯದಲ್ಲಿ ಕೈಗೊಳ್ಳಲು ಹಾಗು ಕಟಾವು ಸಮಯದಲ್ಲಿ ಬೆಳೆ ನಷ್ಟವನ್ನು ತಡೆಗಟ್ಟಲು ಹೈಟೆಕ್ ಹಾರ್ವೆಸ್ಟರ್ ಹಬ್‌ಗಳನ್ನು ಹಂತ ಹಂತವಾಗಿ ಸ್ಥಾಪಿಸಲು ರಾಜ್ಯದಲ್ಲಿ ಪ್ರಚಲಿತವಿರುವ ಕೃಷಿ ಯಂತ್ರಧಾರೆ ಕೇಂದ್ರಗಳು / ರೈತ ಉತ್ಪಾದಕ ಸಂಸ್ಥೆಗಳು / ಸೇವಾದಾರ ಸಂಸ್ಥೆಗಳು/ವೈಯಕ್ತಿಕ ಫಲಾನುಭವಿಗಳನ್ನು ಒಳಗೊಂಡಂತೆ ಅರ್ಹತೆಯಿರುವ ಸಂಸ್ಥೆಗಳನ್ನು / ವೈಯಕ್ತಿಕ ಫಲಾನುಭವಿಗಳನ್ನು ಆಯ್ಕೆ ಮಾಡಿ ಅವಶ್ಯಕತೆಯಿರುವ ಪ್ರದೇಶಗಳಲ್ಲಿ Hi-Tech Harvester Hubs ಗಳನ್ನು ಸ್ಥಾಪಿಸಲಾಗುವುದು. ಸದರಿ ಕೇಂದ್ರಗಳಲ್ಲಿ ದಾಸ್ತಾನೀಕರಿಸುವ Hi-Tech ಕಟಾವು / ಒಕ್ಕಣೆ ಯಂತ್ರಗಳಿಗೆ ಸಮನ್ಯ ವರ್ಗದ ರೈತರಿಗೆ ಗರಿಷ್ಠ ಶೇ.50 ರಂತೆ, ಪ.ಜ/ಪ.ಪಂ. ವರ್ಗದ ರೈತರಿಗೆ ಗರಿಷ್ಠ ಶೇ.70 ರಂತೆ ಹಾಗೂ ಸಂಘ-ಸಂಸ್ಥೆಗಳಿಗೆ (ಚಾಲ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರಗಳ ಸೇವಾದಾರ ಸಂಸ್ಥೆ / FPO ಗಳ ನ್ನೊಳಗೊಂಡಂತೆ) ಗರಿಷ್ಠ ಶೇ.70 ರಂತೆ ಸಹಾಯಧನವನ್ನು ಒದಗಿಸಲಾಗುವುದು. ಪ್ರತಿ ಒಂದು ಹೈಟೆಕ್ ಹಾರ್ವೆಸ್ಟರ್ ಹಬ್ ಘಟಕಕ್ಕೆ ಗರಿಷ್ಠ ಮೊತ್ತ ರೂ.100.00 ಲಕ್ಷಗಳು ಮೀರದಂತೆ (ರೂ.5.00 ಲಕ್ಷಗಳ ಆಡಳಿತಾತ್ಮಕ ವೆಚ್ಚ ಒಳಗೊಂಡಂತೆ) ಸಹಾಯಧನವನ್ನು ಒದಗಿಸಲಾಗುವುದು. ಸದರಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ರೈತರಿಗೆ ಒದಗಿಸಲಾಗುವುದು.

13. **ಆಹಾರ ಮತ್ತು ಪೌಷ್ಠಿಕ ಭದ್ರತೆ (Food and Nutrition Security-FNS)**: ಈ ಯೋಜನೆಯಡಿ ಭತ್ತ, ದ್ವಿದಳಧಾನ್ಯ, TRFA-ದ್ವಿದಳಧಾನ್ಯ, ಒರಟುಧಾನ್ಯ, ನ್ಯೂಟ್ರಿಸಿರಿಧಾನ್ಯ, ಕಬ್ಬು ಮತ್ತು ಹತ್ತಿ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ಆಧುನಿಕ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಭತ್ತ, ದ್ವಿದಳಧಾನ್ಯ, ನ್ಯೂಟ್ರಿಸಿರಿಧಾನ್ಯ ಮತ್ತು ಒರಟುಧಾನ್ಯ ಉತ್ಪಾದನೆಗೆ ಬಿತ್ತನೆ ಬೀಜ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜಿಪ್ಸಂ/ ಕೃಷಿ ಸುಣ್ಣ, ನೀರು ಒದಗಿಸುವ ಪೈಪುಗಳು ಹಾಗೂ ಕೃಷಿ ಉಪಕರಣಗಳನ್ನು ಶೇ.50ರ ಸಹಾಯಧನವನ್ನು ನೀಡಲಾಗುತ್ತದೆ. ಇದಲ್ಲದೆ, ದೃಢೀಕೃತ ಬಿತ್ತನೆ ಬೀಜದ ಉತ್ಪಾದನೆಯನ್ನು ಪ್ರೋತ್ಸಾಹಿಸಲು ದ್ವಿದಳಧಾನ್ಯ ಬೆಳೆಗಳಿಗೆ ಪ್ರತಿ ಕ್ವಿಂಟಾಲಿಗೆ ರೂ.5000/- ಮತ್ತು ನ್ಯೂಟ್ರಿಸಿರಿಧಾನ್ಯಗಳಿಗೆ ರೂ.3000/- ಪ್ರೋತ್ಸಾಹ ಧನ ನೀಡಲಾಗುತ್ತಿದೆ

ಸದರಿ ಯೋಜನೆಯಡಿ:-

- ಎಲ್ಲಾ ರೈತರು ಅರ್ಹರಾಗಿದ್ದು, FRUITS Portal ನಲ್ಲಿ ಕಡ್ಡಾಯವಾಗಿ ನೋಂದಣಿ ಹೊಂದಿರಬೇಕು.
- ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪ ಯೋಜನೆಯ ಅನುಷ್ಠಾನ ಕುರಿತು ಭಾರತ ಸರ್ಕಾರದ ನಿರ್ಣಯದಂತೆ ಯೋಜನೆಯ ಒಟ್ಟಾರೆ ಅನುದಾನದಲ್ಲಿ ವಿಶೇಷ ಘಟಕ ಉಪಯೋಜನೆಗೆ ಮತ್ತು ಗಿರಿಜನ ಉಪ ಯೋಜನೆಗೆ ಮೀಸಲಿರಿಸಿರುವ ಅನುದಾನವನ್ನು ಆಯಾ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯೆ ಮತ್ತು ಭೂ ಹಿಡುವಳಿಯನ್ನಾಧರಿಸಿ ನಿಗದಿಪಡಿಸಿ ಬಿಡುಗಡೆಗೊಳಿಸಲಾಗುವುದು.
- ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅನುದಾನದ ಕನಿಷ್ಠ ಶೇ.33 ರಷ್ಟು ಹಾಗು ಮಹಿಳಾ ರೈತರಿಗೆ ಅನುದಾನದ ಕನಿಷ್ಠ ಶೇ.30 ರಷ್ಟನ್ನು ಮೀಸಲಿರಿಸುವುದು.
- ಒಂದು ಹಂಗಾಮಿನಲ್ಲಿ ಯೋಜನೆಯ ವಿವಿಧ ಘಟಕಗಳಡಿ ಸಹಾಯಧನವನ್ನು ಪಡೆಯಲು ಎಲ್ಲಾ ವರ್ಗದ ರೈತರಿಗೂ 5 ಹೆಕ್ಟೇರ್ ಕ್ಷೇತ್ರ ವಿಸ್ತೀರ್ಣವನ್ನು ಮಿತಿಗೊಳಿಸಲಾಗಿರುತ್ತದೆ.
- ಒಂದು ಹಂಗಾಮಿನಲ್ಲಿ ಪ್ರಾತ್ಯಕ್ಷಿಕೆಯಡಿ ಸಹಾಯಧನ ಪಡೆಯಲು ಎಲ್ಲಾ ವರ್ಗದ ಫಲಾನುಭವಿ ರೈತರುಗಳಿಗೆ ಗರಿಷ್ಟ 2 ಹೆಕ್ಟೇರ್ ಕ್ಷೇತ್ರ ವಿಸ್ತೀರ್ಣವನ್ನು ಮಿತಿಗೊಳಿಸಲಾಗಿರುತ್ತದೆ.

14. **ಮುಖ್ಯಮಂತ್ರಿಯವರ ಸೂಕ್ಷ್ಮ ನೀರಾವರಿ ಯೋಜನೆ:** ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಅನುಷ್ಠಾನ ಮಾಡಲಾಗುತ್ತಿದೆ. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಅನುಷ್ಠಾನಕ್ಕೆ ತೋಟಗಾರಿಕೆ ಇಲಾಖೆಯು ನೋಡಲ್ ಇಲಾಖೆಯಾಗಿರುತ್ತದೆ. ಕೇಂದ್ರ ಸರ್ಕಾರದ ಮಾರ್ಗಸೂಚಿ ಅನ್ವಯ ಸಣ್ಣ / ಅತಿ ಸಣ್ಣ ರೈತರಿಗೆ ಶೇ.55 ಮತ್ತು ಇತರೇ ವರ್ಗದ ರೈತರಿಗೆ ಶೇ.45 ರಷ್ಟು ಸಹಾಯಧನವನ್ನು ಪ್ರತಿಯೊಬ್ಬ ರೈತರಿಗೆ ಗರಿಷ್ಠ 5.0 ಹೆಕ್ಟೇರ್ ಪ್ರದೇಶದವರೆಗೆ ನೀಡಲು ಅವಕಾಶವಿರುತ್ತದೆ. ಇದರಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು 60:40 ಇದ್ದು, ರಾಜ್ಯದಲ್ಲಿ ರಾಜ್ಯ ಸರ್ಕಾರದ ವತಿಯಿಂದ ರಾಜ್ಯದ ಪಾಲಿನ ಹೆಚ್ಚುವರಿ ಸಹಾಯಧನವನ್ನು ಸೇರಿಸಿ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ.

ಸದರಿ ಯೋಜನೆಯಡಿ:-

- ಎಲ್ಲಾ ವರ್ಗದ ರೈತರಿಗೆ 2.0 ಹೆಕ್ಟೇರ್ ಪ್ರದೇಶದವರೆಗೆ ತುಂತುರು ನೀರಾವರಿಗೆ ಶೇ.90 ರ ಸಹಾಯಧನ.
- ಸಣ್ಣ / ಅತಿ ಸಣ್ಣ / ಪ.ಜಾ / ಪ.ಪಂ. ವರ್ಗದ ರೈತರಿಗೆ 2.0 ಹೆಕ್ಟೇರ್ ಪ್ರದೇಶದವರೆಗೆ ಹನಿ ನೀರಾವರಿಗೆ ಶೇ.90 ರ ಸಹಾಯಧನ.
- ಉಳಿದ ಎಲ್ಲಾ ರೈತರ ವರ್ಗಕ್ಕೆ 5.0 ಹೆಕ್ಟೇರ್ ಪ್ರದೇಶದವರೆಗೆ ಶೇ.45 ರ ಸಹಾಯಧನ.
- ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ, ಒಮ್ಮೆ ಸೂಕ್ಷ್ಮ ನೀರಾವರಿ ಸೌಲಭ್ಯ ಪಡೆದ ರೈತರು 7 ವರ್ಷಗಳ ನಂತರ ಮತ್ತೆ ಸೂಕ್ಷ್ಮ ನೀರಾವರಿ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ. ಆದರೆ, ರಾಜ್ಯದ ಎಲ್ಲಾ ರೈತರಿಗೂ ಪರಿಶಿಷ್ಟ ಜಾತಿ ಹಾಗು ಪರಿಶಿಷ್ಟ ಪಂಗಡದ ರೈತರನ್ನು ಹೊರತು ಪಡಿಸಿ ಸದರಿ ಯೋಜನೆಯ ಸೌಲಭ್ಯ ನೀಡುವ ದೃಷ್ಟಿಯಿಂದ, 7 ವರ್ಷಗಳ ನಂತರ ಸದರಿ ಸೌಲಭ್ಯ ನೀಡುವುದನ್ನು ಕಡಿತಗೊಳಿಸಿ, ಕೇವಲ ಒಂದು ಬಾರಿಗೆ ಮಿತಿಗೊಳಿಸಲಾಗಿದೆ.
- ಇದಕ್ಕಾಗಿ Farmer Registration & Unified Beneficiary Information System - FRUITS ಪೋರ್ಟಲ್ ನಲ್ಲಿ ನೋಂದಣಿಯಾಗಿ Farmers Identification number (FID) ಪಡೆಯಬೇಕು. ನೀರಾವರಿ ಸೌಲಭ್ಯ ಹೊಂದಿರುವ ರೈತರು ನಿಗದಿತ ಅರ್ಜಿ ನಮೂನೆಯಲ್ಲಿ ಆರ್.ಟಿ.ಸಿ. (ಪಹಣಿ) ಯೊಂದಿಗೆ ರೈತ ಸಂಪರ್ಕ ಕೇಂದ್ರದಲ್ಲಿ ಅರ್ಜಿ

ಸಲ್ಲಿಸಬೇಕು ಹಾಗೂ ಕೆ-ಕಿಸಾನ್‌ನಲ್ಲಿ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಅಪ್ ಲೋಡ್ ಮಾಡಬೇಕು. ರೈತರು ಜೇಷ್ಠತೆ ಹಾಗೂ ಅನುದಾನ ಲಭ್ಯತೆಯ ಆಧಾರದ ಮೇರೆಗೆ ದಾಖಲಾತಿಗಳನ್ನು ಸಲ್ಲಿಸಿದ ರೈತರಿಗೆ ವಿತರಿಸಿದ / ರೈತರ ಹೊಲದಲ್ಲಿ ಅಳವಡಿಸಿದ ಸೂಕ್ಷ್ಮ ನೀರಾವರಿ ಸಲಕರಣೆಗಳಿಗೆ ಸಹಾಯಧನ ಒದಗಿಸಲಾಗುತ್ತಿದೆ.

15. ಕೃಷಿ ವಿಸ್ತರಣೆ ಉಪ ಅಭಿಯಾನ (Sub Mission on Agriculture Exrension-SMAE): ವಿಸ್ತರಣಾ ಸುಧಾರಣೆಗಳಿಗಾಗಿ ರಾಜ್ಯ ವಿಸ್ತರಣಾ ಕಾರ್ಯಕ್ರಮಗಳಿಗೆ ಬೆಂಬಲ ಯೋಜನೆಯು ವಿಸ್ತರಣಾ ಪದ್ಧತಿಯನ್ನು ರೈತರೇ ಮುನ್ನಡೆಸುವ ಹಾಗೂ ರೈತರಿಗೆ ಉತ್ತರದಾಯಿತ್ವವಾಗಬೇಕಾದ ಯೋಜನೆಯಾಗುವ ಗುರಿಯನ್ನು ಹೊಂದಿದೆ. ಭಾಗವಹಿಸುವಿಕೆ ಆಧಾರದ ಮೇಲೆ ವಿಸ್ತರಣಾ ಸುಧಾರಣೆಗಳನ್ನು ಜಾರಿಗೆ ತರಲು ಮತ್ತು ರೈತರಿಗೆ ತಂತ್ರಜ್ಞಾನವನ್ನು ಹೊಸ ಸಾಂಸ್ಥಿಕ ವ್ಯವಸ್ಥೆ ಮೂಲಕ ಪ್ರಸರಿಸುವ ಉದ್ದೇಶದಿಂದ ಜಿಲ್ಲಾ ಮಟ್ಟದಲ್ಲಿ ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ(ATMA)ಯನ್ನು ಅಸ್ತಿತ್ವಕ್ಕೆ ತರಲಾಗಿದೆ. ಈ ಯೋಜನೆಯಡಿಯಲ್ಲಿ ಭಾರತ ಸರ್ಕಾರ ನಿಗದಿಪಡಿಸಿರುವ ಮಾರ್ಗಸೂಚಿಯಂತೆ ಅಧಿಕಾರಿ/ ರೈತರ ತರಬೇತಿ, ಪರಿಚಯ ಪ್ರವಾಸ, ಪ್ರಾತ್ಯಕ್ಷಿಕೆ, ರೈತರ ಗುಂಪು ರಚನೆ, ಕೃಷಿ ಪಾಠಶಾಲೆ, ಕೃಷಿ ಮೇಳ, ಕ್ಷೇತ್ರೋತ್ಸವ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತದೆ. ಯೋಜನೆಯಡಿ ಆಯೋಜಿಸುವ ವಿಸ್ತರಣಾ ಕಾರ್ಯಕ್ರಮಗಳಲ್ಲಿ ಎಲ್ಲಾ ವರ್ಗದ ರೈತರು / ರೈತ ಮಹಿಳೆಯರ ಪಾಲ್ಗೊಳ್ಳುವಿಕೆ ಅವಕಾಶವಿರುತ್ತದೆ.

16. ಕೃಷಿ ಯಾಂತ್ರೀಕರಣ ಉಪ ಅಭಿಯಾನ (Sub Mission on Agriculture Mechanisation-SMAM): ರಾಜ್ಯದಲ್ಲಿ ರೈತರು ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು, ಕೃಷಿ ಕಾರ್ಮಿಕರ ಸಮಸ್ಯೆಯನ್ನು ನೀಗಿಸಲು, ಹೆಚ್ಚಿನ ಇಳುವರಿ ಪಡೆಯಲು ನೆರವಾಗುವಂತೆ ಸಹಕಾರಿಯಾಗಲು ಹಾಗೂ ಕ್ಷೇತ್ರ ಶಕ್ತಿಯನ್ನು (ಪ್ರಸ್ತುತವಿರುವ 2.115 KW/ Ha to 2.5kW/Ha by 2023 and 4.00kW/ha by 2030) ಹೆಚ್ಚಿಸಲು ಕೃಷಿ ಯಾಂತ್ರೀಕರಣ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ. ರೈತರಿಗೆ ಟ್ರ್ಯಾಕ್ಟರ್(45HP ವರೆಗೆ), ಪವರ್ ಟಿಲ್ಲರ್‌ಗಳ ಜೊತೆಗೆ ಭೂಮಿ ಸಿದ್ಧತೆ ಉಪಕರಣಗಳು, ಬಿತ್ತನೆ/ನಾಟಿ ಮಾಡುವ ಉಪಕರಣಗಳು, ಶಕ್ತಿ ಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು, ಶಕ್ತಿ ಚಾಲಿತ ಅಂತರ ಬೇಸಾಯ ಉಪಕರಣಗಳು, ಕೊಯ್ಲು ಮತ್ತು ಸಂಸ್ಕರಣಾ ಉಪಕರಣಗಳು, ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಗಳು, ಅಂತರ ಬೇಸಾಯ ಉಪಕರಣಗಳು, ಡೀಸೆಲ್ ಪಂಪ್‌ಸೆಟ್ ಗಳು ಇತ್ಯಾದಿ ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ ಒದಗಿಸಲಾಗುತ್ತಿದೆ. ಹೀಗೆ ಉಳುಮೆಯಿಂದ ಕೊಯ್ಲಿನವರೆಗೆ ಹಾಗು ಕೊಯ್ಲು ನಂತರ ಉಪಯುಕ್ತವಾಗುವ ವಿವಿಧ ನಮೂನೆಯ ಕೃಷಿ ಉಪಕರಣಗಳನ್ನು ಸಹಾಯಧನದಡಿ ರೈತರಿಗೆ ಒದಗಿಸಲಾಗುತ್ತಿದೆ.

ಸದರಿ ಯೋಜನೆಯಡಿ:-

- ಕೇಂದ್ರ ಪುರಸ್ಕೃತ ಕೃಷಿ ಯಾಂತ್ರೀಕರಣ ಉಪ ಅಭಿಯಾನ ಯೋಜನೆಯಡಿ ಕೃಷಿ ಯಂತ್ರೋಪಕರಣಗಳನ್ನು ಸಾಮಾನ್ಯ ವರ್ಗದ ಸಣ್ಣ/ ಅತಿಸಣ್ಣ/ ಮಹಿಳೆಯರಿಗೆ/ ಪ.ಜಾ./ಪ.ಪಂ. ರೈತರಿಗೆ ಶೇ.50 ರಷ್ಟು ಹಾಗೂ ಇತರೆ ವರ್ಗದ ರೈತರಿಗೆ ಶೇ. 40 ರಷ್ಟು ಹಾಗು ಕೃಷಿ ಸಂಸ್ಕರಣಾ ಘಟಕಗಳಿಗೆ ಸಾಮಾನ್ಯ ವರ್ಗದ ಸಣ್ಣ/ಅತಿ ಸಣ್ಣ/ ಮಹಿಳೆಯರಿಗೆ/ ಪ.ಜಾ./ಪ.ಪಂ. ರೈತರಿಗೆ ಶೇ.60 ರಷ್ಟು ಹಾಗೂ ಇತರೆ ವರ್ಗದ ರೈತರಿಗೆ ಶೇ. 50 ರಷ್ಟು ಸಹಾಯಧನ ಒದಗಿಸಲು ಅವಕಾಶವಿರುತ್ತದೆ.
- ರಾಜ್ಯದಲ್ಲಿ ಕೃಷಿ ಯಾಂತ್ರೀಕರಣ / ಕೃಷಿ ಸಂಸ್ಕರಣೆ ಕಾರ್ಯಕ್ರಮಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ.50 ರಷ್ಟು ಮತ್ತು ಪ.ಜಾ./ಪ.ಪಂ.ರೈತರಿಗೆ ಶೇ.90 ರಷ್ಟು ಸಹಾಯಧನ ಒದಗಿಸಿ ಅನುಷ್ಠಾನ ಮಾಡಲಾಗುತ್ತಿದೆ. ಸದರಿ ಯೋಜನೆಯಡಿ

ಸಾಮಾನ್ಯ ರೈತರಿಗೆ ಶೇ.40 ರಷ್ಟು ಹಾಗೂ ಪ.ಜಾ/ಪ.ಪಂ/ಮಹಿಳಾ ಸಣ್ಣ/ಅತೀ ಸಣ್ಣ/ರೈತರಿಗೆ ಶೇ.50 ರಷ್ಟು ಸಹಾಯಧನ ಒದಗಿಸಲಾಗುತ್ತಿದೆ.

- ರೈತರು ಒಂದಕ್ಕಿಂತ ಹೆಚ್ಚು ವಿವಿಧ ಉಪಕರಣಗಳಿಗೆ (ಪುನರಾವರ್ತನೆಯಾಗದಂತೆ) ಗರಿಷ್ಠ ರೂ.1.00 ಲಕ್ಷದವರೆಗೆ ಸಹಾಯಧನವನ್ನು ಪಡೆಯಬಹುದಾಗಿರುತ್ತದೆ.
- 45 ಪಿ.ಟಿ.ಒ ಹೆಚ್.ಪಿ ವರೆಗಿನ ಟ್ರಾಕ್ಟರ್ ಗಳಿಗೆ ಸಾಮಾನ್ಯ ವರ್ಗದ ರೈತರಿಗೆ ರೂ.0.75 ಲಕ್ಷ ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು ಗರಿಷ್ಠ ರೂ.3.00 ಲಕ್ಷ ಸಹಾಯಧನ ನೀಡಲಾಗುತ್ತಿದೆ.
- ರೈತರು ಯಾವುದಾದರು ಉಪಕರಣವನ್ನು ರಿಯಾಯಿತಿ ದರದಲ್ಲಿ ಕೃಷಿ ಇಲಾಖೆ ಮತ್ತು ಕೃಷಿ ಸಂಬಂಧಿತ ಇಲಾಖೆಗಳ ಮೂಲಕ ಪಡೆದಿದ್ದಲ್ಲಿ, ಅದೇ ಉಪಕರಣವನ್ನು ಮುಂದಿನ ಏಳು ಆರ್ಥಿಕ ವರ್ಷಗಳಲ್ಲಿ ರಿಯಾಯಿತಿ ದರಗಳಲ್ಲಿ ಪಡೆಯಲು ಅರ್ಹರಿರುವುದಿಲ್ಲ.
- ಕೇಂದ್ರ ಸರ್ಕಾರವು ನಿಗದಿ ಪಡಿಸಿರುವ ತಾಂತ್ರಿಕ ಮಾನದಂಡಗಳನ್ನು ಪರಿಗಣಿಸಿ ಯಂತ್ರೋಪಕರಣಗಳನ್ನು ಸರಬರಾಜು ಮಾಡುವ ಸಂಸ್ಥೆಗಳನ್ನು ಕೃಷಿ ಇಲಾಖೆಯ ವತಿಯಿಂದ ಎಂಪ್ಯಾನೆಲ್ ಮಾಡಲಾಗಿರುತ್ತದೆ. ಸದರಿ ಎಂಪ್ಯಾನಲ್/ದರ ಕರಾರು ಸಂಸ್ಥೆಗಳ ಎಂಪ್ಯಾನಲ್‌ಗೊಂಡಿರುವ ಯಂತ್ರೋಪಕರಣಗಳನ್ನು ಮಾತ್ರ ಸಹಾಯಧನ ಯೋಜನೆಯಡಿ ವಿತರಿಸಲಾಗುತ್ತಿದೆ.
- FRUITS (Farmers Registration and Unified Beneficiary Information System) Portal ತಂತ್ರಾಂಶದಲ್ಲಿ ನೊಂದಾಯಿತರಾದ ರೈತರು ಮಾತ್ರ ತಾವು ಇಚ್ಛಿಸುವ ಯಂತ್ರೋಪರಕರಣಗಳಿಗೆ ಕೆ-ಕಿಸಾನ್ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
- ರೈತರು ತಾವು ಇಚ್ಛಿಸುವ ಯಂತ್ರೋಪಕರಣಗಳಿಗೆ ಕೆ-ಕಿಸಾನ್ ಪೋರ್ಟಲ್‌ನ Citizen Centric login (kkisan.karnataka.gov.in) ಅಥವಾ ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.
- ರೈತರು ಸಲ್ಲಿಸುವ ಅರ್ಜಿಗಳ ಜೇಷ್ಠತೆ ಆಧಾರದ ಮೇಲೆ, ರೈತರ ವರ್ಗದ ಆಧಾರದ ಮೇಲೆ ಮತ್ತು ಅನುದಾನ ಲಭ್ಯತೆ ಆಧಾರದ ಮೇಲೆ ಸಹಾಯಧನ ಯೋಜನೆಗಳಡಿ ರೈತರಿಗೆ ಯಂತ್ರೋಪಕರಣಗಳನ್ನು ವಿತರಿಸಲಾಗುತ್ತಿದೆ.

17. **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸಮಗ್ರ ಕೃಷಿ ಪದ್ಧತಿಯ ವಿಸ್ತರಣೆ ಹಾಗೂ ಜನಪ್ರಿಯಗೊಳಿಸುವ ಕಾರ್ಯಕ್ರಮ (RKVY-IFS):** ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಾದ ತೋಟಗಾರಿಕೆ ಹಾಗೂ ಪಶುಸಂಗೋಪನೆಗಳನ್ನು ಒಗ್ಗೂಡಿಸಿ "ಸಮಗ್ರ ಕೃಷಿ ಪದ್ಧತಿ "ಮೂಲಕ ರೈತನ ಆದಾಯ ಹೆಚ್ಚಳ ಮಾಡುವುದು ಹಾಗೂ ಅಳವಡಿಸಿದ ಪ್ರದೇಶದಲ್ಲಿ/ ಜಮೀನಿನಲ್ಲಿ ಬೆಳೆ ಉತ್ಪಾದಕತೆ, ಸುಸ್ಥಿರತೆ, ಸಮತೋಲನಾ ಆಹಾರ ಉತ್ಪಾದನೆ, ತಾಜ್ಯಗಳ ಮರುಬಳಕೆ ಹಾಗೂ ವರ್ಷಪೂರ್ತಿ ಆದಾಯ ಹೆಚ್ಚಿಸುವ ಉದ್ದೇಶದಿಂದ ಸಮಗ್ರ ಕೃಷಿ ಪದ್ಧತಿ ಮಾದರಿಗಳ ಅನುಷ್ಠಾನಕ್ಕೆ ಸಹಾಯಧನ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಒಟ್ಟಾರೆಯಾಗಿ 4000 ಸಮಗ್ರ ಕೃಷಿ ಪದ್ಧತಿ ಮಾದರಿಗಳನ್ನು ಅನುಷ್ಠಾನಗೊಳಿಸಲು ಕಾರ್ಯಕ್ರಮವನ್ನು ರೂಪಿಸಿದ್ದು ಅದರಂತೆ ಅನುಷ್ಠಾನ ಮಾಡಲಾಗುತ್ತಿದೆ.

18. **ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ-ಎಣ್ಣೆಕಾಳು (NMEO-Oilseeds):** ಈ ಯೋಜನೆಯಡಿ ಎಣ್ಣೆಕಾಳುಗಳ ಉತ್ಪಾದನೆಯನ್ನು ಹೆಚ್ಚಿಸಲು ನೂತನ/ಸುಧಾರಿತ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಬಿತ್ತನೆ ಬೀಜ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಪೀಡೆನಾಶಕಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜಿಪ್ಸಂ, ಕೃಷಿ ಉಪಕರಣಗಳು ಹಾಗೂ ನೀರು ಒದಗಿಸುವ ಪೈಪುಗಳಿಗೆ

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯೆ ಮತ್ತು ಭೂ ಹಿಡುವಳಿಯನ್ನಾಧರಿಸಿ ನಿಗಧಿಪಡಿಸಿ ಬಿಡುಗಡೆಗೊಳಿಸಲಾಗುತ್ತಿದೆ.

- ಮಹಿಳಾ ರೈತರಿಗೆ ಅನುದಾನದ ಕನಿಷ್ಠ ಶೇ. 30 ರಷ್ಟನ್ನು ಮೀಸಲಿರಿಸುವುದು.

20.ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ (PMFME): ವ್ಯಕ್ತಿಗತ ಕಿರು ಉದ್ದಿಮೆಗಳಿಗೆ ಬೆಂಬಲ, ರೈತ ಉತ್ಪಾದಕರ ಸಂಸ್ಥೆಗಳು/ ಉತ್ಪಾದಕ ಸೊಸೈಟಿಗಳಿಗೆ ಸಹಾಯಧನ, ಸ್ವಸಹಾಯ ಸಂಘಗಳ ಸದಸ್ಯರಿಗೆ ಕಾರ್ಯ ನಿರ್ವಹಣಾ ಬಂಡವಾಳ ಹಾಗೂ ಪರಿಕರಗಳ ಖರೀದಿಗೆ ಪ್ರಾಥಮಿಕ ಬಂಡವಾಳ, ಸಾಮಾನ್ಯ ಮೂಲಭೂತ ಸೌಕರ್ಯಕ್ಕೆ ಬೆಂಬಲ, ಬ್ರ್ಯಾಂಡಿಂಗ್ ಹಾಗೂ ಮಾರುಕಟ್ಟೆಗೆ ಬೆಂಬಲ, ರಾಜ್ಯದ ತಾಂತ್ರಿಕ ಸಂಸ್ಥೆಗಳಲ್ಲಿ ಆಹಾರ ಸಂಸ್ಕರಣಾ ಉದ್ಯಮಿಗಳಿಗೆ ತರಬೇತಿ ನೀಡಲು ಹಾಗೂ ಪ್ರಾಯೋಗಿಕ ಉತ್ಪಾದನೆ ಕೈಗೊಳ್ಳಲು ಇನ್ ಕ್ಯುಬೇಷನ್ ಕೇಂದ್ರಗಳ ಸ್ಥಾಪನೆಗೆ ಅನುದಾನವನ್ನು ನೀಡಲಾಗುವುದು. KAPPEC ಸಂಸ್ಥೆಯು ಈ ಯೋಜನೆಯ ಅನುಷ್ಠಾನಕ್ಕೆ ನೋಡಲ್ ಇಲಾಖೆಯಾಗಿರುತ್ತದೆ.

ಅಸಂಘಟಿತ ವಲಯದಲ್ಲಿರುವ ಸೂಕ್ಷ್ಮ/ ಕಿರು ಆಹಾರ ಸಂಸ್ಕರಣ ಉದ್ದಿಮೆಗಳನ್ನು ಪ್ರೋತ್ಸಾಹಿಸಿ ಅವುಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು ಮತ್ತು ಅವುಗಳನ್ನು ಸಂಘಟಿತ ವಲಯಕ್ಕೆ ತರುವುದು ಹಾಗೂ ರೈತ ಉತ್ಪಾದಕ ಸಂಸ್ಥೆಗಳು, ಸ್ವಸಹಾಯ ಸಂಘಗಳು ಹಾಗೂ ಉತ್ಪಾದಕ ಸಹಕಾರಿ ಸಂಘಗಳಿಗೆ ಅವುಗಳ ಸರಪಳಿಕೊಂಡಿಯೊಂದಿಗೆ ಉತ್ತೇಜನ ನೀಡಲಾಗುತ್ತಿದೆ. ಯೋಜನೆಯ ಅನುಷ್ಠಾನದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು 60:40ರ ಅನುಪಾತದಲ್ಲಿ ಇದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರವು ಶೇ.35ರಷ್ಟು ಹಾಗೂ ರಾಜ್ಯ ಸರ್ಕಾರವು PMFME ಯೋಜನೆಯಡಿಯಲ್ಲಿ ಶೇ.15 ರಷ್ಟು ಹೆಚ್ಚುವರಿ ಸಹಾಯಧನವನ್ನು ನೀಡಲಾಗುತ್ತಿದೆ.

21.ಮಣ್ಣು ಆರೋಗ್ಯ ಮತ್ತು ಫಲವತ್ತತೆ ಯೋಜನೆ (Soil Health and Fertility – SHF RKVY): ಮಣ್ಣು ಆರೋಗ್ಯ ಚೀಟಿ ಶಿಫಾರಸ್ಸಿನ ಆಧಾರದ ಮೇಲೆ ರಸಗೊಬ್ಬರಗಳ ಬಳಕೆ ಮಾಡುವ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಲು ಮಣ್ಣು ಮಾದರಿಗಳನ್ನು ಸಂಗ್ರಹಸಿ, ವಿಶ್ಲೇಷಿಸಿ, ಮಣ್ಣು ಆರೋಗ್ಯ ಚೀಟಿಗಳ ವಿತರಣೆ ಮಾಡಲಾಗುವುದು. ಇಲಾಖೆಯ ಮೂರು ಮಣ್ಣು ಪರೀಕ್ಷಾ ಪ್ರಯೋಗಾಲಯ ಪ್ರಯೋಗಾಲಯಗಳ ಬಲವರ್ಧನೆ. ಇಲಾಖೆಯ 7 ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯಗಳ NABL ಅಕ್ರಿಡಿಟೇಷನ್ ಮತ್ತು 30 ಮಣ್ಣು ಪರೀಕ್ಷಾ ಪ್ರಯೋಗಾಲಯಗಳ NABL recognition ಕ್ರಮ ಕೈಗೊಳ್ಳಲಾಗುವುದು. ಇದಲ್ಲದೆ, ಜಲಾನಯನ ಅಭಿವೃದ್ಧಿ ಇಲಾಖೆವತಿಯಿಂದ ಉಪಮೇಲ್ಮೈ ಕಾಲುವೆಗಳ ನಿರ್ಮಾಣದಿಂದ ಸಮಸ್ಯಾತ್ಮಕ ಮಣ್ಣುಗಳ ಪುನಃಶ್ಚೇತನ ಮಾಡಲಾಗುವುದು.

ಅಪರ ಕೃಷಿ ನಿರ್ದೇಶಕರು
(ಬೆಳೆ ಅಭಿವೃದ್ಧಿ ಯೋಜನೆ)

ಶೇ.50ರ ಸಹಾಯಧನವನ್ನು ನೀಡಲಾಗುತ್ತದೆ. ಇದಲ್ಲದೇ, ದೃಢೀಕೃತ ಬಿತ್ತನೆ ಬೀಜದ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಪ್ರತಿ ಕ್ವಿಂಟಾಲ್ ಬಿತ್ತನೆ ಬೀಜೋತ್ಪಾದನೆಗೆ ರೂ.2500/- ಗಳ ಪ್ರೋತ್ಸಾಹಧನ ನೀಡಲಾಗುತ್ತಿದೆ.

ಸದರಿ ಯೋಜನೆಯಡಿ:-

- ಎಲ್ಲಾ ರೈತರು ಅರ್ಹರಾಗಿದ್ದು, FRUITS Portal ನಲ್ಲಿ ಕಡ್ಡಾಯವಾಗಿ ನೋಂದಣಿ ಹೊಂದಿರಬೇಕು.
- ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಅನುಷ್ಠಾನ ಕುರಿತು ಭಾರತ ಸರ್ಕಾರದ ನಿರ್ಣಯದಂತೆ ಯೋಜನೆಯ ಒಟ್ಟಾರೆ ಅನುದಾನದಲ್ಲಿ ವಿಶೇಷ ಘಟಕ ಉಪಯೋಜನೆಗೆ ಮತ್ತು ಗಿರಿಜನ ಉಪಯೋಜನೆಗೆ ಮೀಸಲಿರಿಸಿರುವ ಅನುದಾನವನ್ನು ಆಯಾ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯೆ ಮತ್ತು ಭೂ ಹಿಡುವಳಿಯನ್ನಾಧರಿಸಿ ನಿಗಧಿಪಡಿಸಿ ಬಿಡುಗಡೆಗೊಳಿಸಲಾಗುತ್ತಿದೆ.
- ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅನುದಾನದ ಕನಿಷ್ಟ ಶೇ.33 ರಷ್ಟು ಹಾಗು ಮಹಿಳಾ ರೈತರಿಗೆ ಅನುದಾನದ ಕನಿಷ್ಟ ಶೇ.30 ರಷ್ಟನ್ನು ಮೀಸಲಿರಿಸುವುದು.
- ಒಂದು ಹಂಗಾಮಿನಲ್ಲಿ ಯೋಜನೆಯ ವಿವಿಧ ಘಟಕಗಳಡಿ ಸಹಾಯಧನವನ್ನು ಪಡೆಯಲು ಎಲ್ಲಾ ವರ್ಗದ ರೈತರಿಗೂ 5 ಹೆಕ್ಟೇರ್ ಕ್ಷೇತ್ರ ವಿಸ್ತೀರ್ಣವನ್ನು ಮಿತಿಗೊಳಿಸಲಾಗಿರುತ್ತದೆ.
- ಒಂದು ಹಂಗಾಮಿನಲ್ಲಿ ಪ್ರಾತ್ಯಕ್ಷಿಕೆಯಡಿ ಸಹಾಯಧನ ಪಡೆಯಲು ಎಲ್ಲಾ ವರ್ಗದ ಫಲಾನುಭವಿ ರೈತರುಗಳಿಗೆ ಗರಿಷ್ಟ 2 ಹೆಕ್ಟೇರ್ ಕ್ಷೇತ್ರ ವಿಸ್ತೀರ್ಣವನ್ನು ಮಿತಿಗೊಳಿಸಲಾಗಿರುತ್ತದೆ.

19. **ಬೆಳೆ ವೈವಿಧ್ಯತೆ ಕಾರ್ಯಕ್ರಮ (Crop Diversification Programme-CDP):** ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಬೆಳೆ ವೈವಿಧ್ಯತೆ ಕಾರ್ಯಕ್ರಮದಡಿ (Crop Diversification Programme) ತಂಬಾಕು ಬೆಳೆಗೆ ಪರ್ಯಾಯ ಬೆಳೆ ಕಾರ್ಯಕ್ರಮವನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಸಹಯೋಗದೊಂದಿಗೆ ಅನುಮೋದಿತ ಕ್ರಿಯಾ ಯೋಜನೆಯನ್ವಯ ಪ್ರಾತ್ಯಕ್ಷಿತೆಗಳು, ಸಮಗ್ರ ಕೃಷಿ ಪದ್ಧತಿಗಳು, ಕೃಷಿ ಹೊಂಡ ನಿರ್ಮಾಣ, ಹಸಿರೆಲೆ ಗೊಬ್ಬರ ಬೀಜ ವಿತರಣೆಗೆ ಶೇಕಡ 50ರ ರಿಯಾಯಿತಿಯಲ್ಲಿ ಸಹಾಯಧನ ನೀಡುವುದರ ಜೊತೆಗೆ ರೈತರಿಗೆ ತರಬೇತಿ ಕಾರ್ಯಕ್ರಮಗಳ ಆಯೋಜನೆ ಹಾಗೂ ತೋಟಗಾರಿಕೆ ಇಲಾಖೆಯಡಿ ಯಂತ್ರೋಪಕರಣಗಳ ಬಳಕೆ ಹಾಗೂ ಮೌಲ್ಯವರ್ಧನೆ ಕಾರ್ಯಕ್ರಮಗಳನ್ನು ಬೆಳಗಾವಿ, ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ರೈತರನ್ನು ತಂಬಾಕು ಬೆಳೆಯ ಬದಲು ಪರ್ಯಾಯ ಬೆಳೆ ಬೆಳೆಸಲು ಪ್ರೋತ್ಸಾಹಿಸುವುದು ಹಾಗೂ ರೈತರ ಆದಾಯ ಹೆಚ್ಚಿಸಲು ಕೃಷಿ ಜೊತೆಗೆ ಇತರೆ ಆದಾಯ ಬರುವ ಚಟುವಟಿಕೆಗಳನ್ನು ಅಳವಡಿಸಲು ಪ್ರೇರೇಪಿಸುವ ಉದ್ದೇಶದೊಂದಿಗೆ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತದೆ.

ಸದರಿ ಯೋಜನೆಯಡಿ:-

- ತಂಬಾಕು ಬೆಳೆಯುವ ಪ್ರದೇಶ ಆಯ್ಕೆ ಮಾಡಿ ಸದರಿ ಪ್ರದೇಶದಲ್ಲಿನ ರೈತರು ಅರ್ಹರಾಗಿದ್ದು, FRUITS Portal ನಲ್ಲಿ ಕಡ್ಡಾಯವಾಗಿ ನೋಂದಣಿ ಹೊಂದಿರಬೇಕು.
- ಎಲ್ಲಾ ತಂಬಾಕು ಬೆಳೆಯುವ ರೈತರು ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಅನುಷ್ಠಾನ ಕುರಿತು ಭಾರತ ಸರ್ಕಾರದ ನಿರ್ಣಯದಂತೆ ಯೋಜನೆಯ ಒಟ್ಟಾರೆ ಅನುದಾನದಲ್ಲಿ ವಿಶೇಷ ಘಟಕ ಉಪಯೋಜನೆಗೆ ಮತ್ತು ಗಿರಿಜನ ಉಪಯೋಜನೆಗೆ ಮೀಸಲಿರಿಸಿರುವ ಅನುದಾನವನ್ನು ಆಯಾ ಜಿಲ್ಲೆಯಲ್ಲಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1894 ಗೆ ಅನುಬಂಧ-5

ಸಾವಯವ ಕೃಷಿಯನ್ನು ಉತ್ತೇಜಿಸಲು ಸರ್ಕಾರದಿಂದ ಯೋಜಿಸಲಾಗಿರುವ ಕಾರ್ಯಕ್ರಮಗಳು-

1. **ಸಾವಯವ ಇಂಗಾಲ ಅಭಿಯಾನ:** ಅಭಿಯಾನದಡಿ ಮಣ್ಣಿನಲ್ಲಿ ಸಾವಯವ ಇಂಗಾಲ ಹೆಚ್ಚಿಸುವ ಉಪಯುಕ್ತತೆಯ ಬಗ್ಗೆ ರೈತರಿಗೆ ಅರಿವು ಮೂಡಿಸುವ ಸಲುವಾಗಿ ಸಾವಯವ ಇಂಗಾಲ ಹೆಚ್ಚಿಸುವ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲು ಫಲಾನುಭವಿ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ.2500/-ಗಳನ್ನು (ಶೇ.100) ಮೀರದಂತೆ ಸಹಾಯಧನ ನೀಡಲಾಗುತ್ತಿದೆ. ಜೊತೆಗೆ ಹಸಿರೆಲೆ ಗೊಬ್ಬರ ಬಳಕೆಯನ್ನು ಪ್ರೋತ್ಸಾಹಿಸಲು ಎಲ್ಲಾ ವರ್ಗದ ರೈತರಿಗೆ ಶೇ.75ರ ರಿಯಾಯಿತಿ ದರದಲ್ಲಿ ಪ್ರಮುಖವಾಗಿ ಡಯಾಂಚಾ, ಸನ್ನೆಂಪ್ ಇತ್ಯಾದಿ ಹಸಿರೆಲೆ ಗೊಬ್ಬರ ಬೀಜಗಳನ್ನು ವಿತರಣೆ ಮಾಡಲಾಗುತ್ತಿದೆ.
2. **ಸಾವಯವ ಪ್ರಮಾಣೀಕರಣ:** ಕಾರ್ಯಕ್ರಮವು ಪ್ರಸ್ತಾವನೆ ಆಧಾರಿತವಾಗಿದ್ದು ಅರ್ಹ ಗುಂಪು ಮತ್ತು ವ್ಯಕ್ತಿಗತ ಪ್ರಸ್ತಾವನೆಗಳಿಗೆ ಶೇ.90 ರಷ್ಟು ಸಾವಯವ ಪ್ರಮಾಣೀಕರಣದ ಶುಲ್ಕವನ್ನು ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ (KSSOCA) ಯ ಮುಖಾಂತರ ಭರಿಸಲಾಗುತ್ತಿದೆ.
3. **ಸಸ್ಯ ಸಂರಕ್ಷಣಾ ಕಾರ್ಯಕ್ರಮದಡಿ** ಜೈವಿಕ ಪೀಡೆನಾಶಕಗಳ ಬಳಕೆಯನ್ನು ಉತ್ತೇಜಿಸಲು ಹಾಗೂ ಸಾವಯವ ಕೃಷಿಯೆಡೆಗೆ ರೈತರನ್ನು ಕೊಂಡೊಯ್ಯುವ ಉದ್ದೇಶದಿಂದ ಶೇ. 50 ರ ರಿಯಾಯಿತಿ ದರದಲ್ಲಿ ಜೈವಿಕ ಪೀಡೆನಾಶಕ ಹಾಗೂ ಜೈವಿಕ ನಿಯಂತ್ರಣಾಕಾರಕಗಳನ್ನು ರೈತರಿಗೆ ವಿತರಿಸಲಾಗುತ್ತಿದೆ.
4. **ಕೇಂದ್ರ ಪುರಸ್ಕೃತ - ಆಹಾರ ಮತ್ತು ಪೌಷ್ಠಿಕ ಭದ್ರತೆ ಮತ್ತು ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ** ಯೋಜನೆಯ ಸಮಗ್ರ ಪೋಷಕಾಂಶ ನಿರ್ವಹಣೆ ಘಟಕಗಳಡಿ ಜೈವಿಕ ಗೊಬ್ಬರಗಳಾದ ರೈಜೋಬಿಯಂ/PSB ಮತ್ತು ಹಸಿರೆಲೆ ಬಿತ್ತನೆ ಬೀಜಗಳನ್ನು ಶೇ 50ರ ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ.
5. **ಸಮುದಾಯ ಬೀಜ ಬ್ಯಾಂಕ್:** 2024-25 ನೇ ಸಾಲಿನ ಆಯವ್ಯಯ ಘೋಷಣೆಯಂತೆ ಕಣ್ಮರೆಯಾಗುತ್ತಿರುವ ಮತ್ತು ಆಯಾ ಸ್ಥಳೀಯ ಪ್ರದೇಶಕ್ಕೆ ಸೂಕ್ತವಾದ ದೇಸಿ ತಳಿಗಳ ಬೀಜಗಳನ್ನು ಗುರುತಿಸುವುದು, ಸಂಗ್ರಹಿಸುವುದು, ಸಂರಕ್ಷಿಸುವುದು, ಅಭಿವೃದ್ಧಿಪಡಿಸಿ ಬಿಡುಗಡೆ ಮಾಡುವ ಮೂಲಕ ದೇಸಿ ತಳಿಯ ಬೀಜಗಳ "ಸಮುದಾಯ ಬೀಜ ಬ್ಯಾಂಕ್" ಸ್ಥಾಪಿಸಲು ಉದ್ದೇಶಿಸಲಾಗಿರುತ್ತದೆ.
6. **ರೈತಸಿರಿ ಯೋಜನೆ:** ರಾಜ್ಯದ ಸಿರಿಧಾನ್ಯ ಕ್ಷೇತ್ರವನ್ನು ವಿಸ್ತರಿಸುವ ನಿಟ್ಟಿನಲ್ಲಿ ಸಾಂಪ್ರದಾಯಿಕವಾಗಿ ಬೆಳೆಯುವ ಸಿರಿಧಾನ್ಯಗಳಾದ ಊದಲು, ನವಣೆ, ಹಾರಕ, ಕೊರಲೆ, ಸಾಮೆ ಮತ್ತು ಬರಗು ಬೆಳೆಗಳನ್ನು ಬೆಳೆಯುವ ರೈತರಿಗೆ ಬೆಳೆ ಸಮೀಕ್ಷೆ ಆಧಾರದ ಮೇರೆಗೆ ಯೋಜನೆಯಡಿ ಪ್ರತಿ ಹೆಕ್ಟೇರ್ ಗೆ ರೂ.10,000/- ಗಳಂತೆ ಪ್ರೋತ್ಸಾಹಧನವನ್ನು ಗರಿಷ್ಠ 2 ಹೆಕ್ಟೇರ್‌ವರೆಗೆ ನೀಡಲಾಗುತ್ತಿದೆ.